ಕೊರವಂಜಿ

A. ANANTHIAH

ಸಂಪುಟ ೨೧ ಆಗಸ್ಟ್ ೧೯೫೯ ಸಂಚಿಕೆ ೫

ಕುಹಕಿಡಿಗಳು

ಕೇರಳದ ವಿಮೋಚನಾ ಸಮರದಲ್ಲಿ ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಸ್ತ್ರೀಯರು ಭಾಗ ವಹಿಸುತ್ತಿದ್ದಾರಂತೆ.

—ಅಲ್ಲವೇ, ಮತ್ತೆ ? ಸ್ತ್ರೀಮಲೆಯಾಳ !

* * * *

೮ ರೂಪಾಯಿನ ಪಗಾರಕ್ಕೆ ಸೇರಿಕೊಂಡೆ, ಈ ಅಂಗಡಿಯಲ್ಲಿ, ಇಪ್ಪತ್ತು ವರ್ಷಗಳಲ್ಲಿ ಮಾಲೀಕನಾದೆ ಎಂದೊಬ್ಬ ಮುದುಕ ಜಂಬ ಕೊಚ್ಚಿಕೊಂಡನಂತೆ. ಆಗ ಹುಡುಗನೊಬ್ಬ "ಈಗೆಲ್ಲಾ ಹಾಗೆ ಮಾಡಿದರೆ ಪೋಲೀಸಿನವರಿಗೆ ಹಿಡಿದು ಕೊಟ್ಟುಬಿಡುತ್ತಾರೆ" ಎಂದುತ್ತರಿಸಿದನಂತೆ.

* * * *

ನಮ್ಮತ್ತೆ ಮಕ್ಕಳೊಂದಿಗೆ ನಮ್ಮ ಮನೆಗೆ ಬಂದಿರುವ ಕಾರಣ ಕೇರಳದಲ್ಲಿ ಏನಾಗುತ್ತಿದೆಯೋ ತಿಳಿಯಲೂ ಅವಕಾಶವಿಲ್ಲ, ಎಂದೊಬ್ಬರು ಉದ್ಗಾರ ತೆಗೆದಿದ್ದಾರೆ.

—ಅಲ್ಲೂ ಅತ್ತೇ ಕಾಟವೇ !

* * * *

ಯುವಕರ ನೂಕುನುಗ್ಗಲಿನಲ್ಲಿ ಒಬ್ಬ ಪ್ರಜ್ಞೆ ತಪ್ಪಿ ಬಿದ್ದನಂತೆ.

—ಸುತ್ತಲೂ ಇದ್ದವರು, ಗಾಳಿ-ಬಿಡಿ, ಅವನ ಷರಟು ಸಡಲಿಸಿ ಎಂದು ಮೊದಲ ಚಿಕಿತ್ಸೆಗಾಗಿ ಕೂಗಲು ಇನ್ನೊಬ್ಬ ಅಂದನಂತೆ—ಆದಕ್ಕೆ ಮುಂಚೆ ಅವನ ಜನಿವಾರ ಸಡಿಲಮಾಡಿ, ಉಸಿರಾಡಬಹುದು ಧಾರಾಳವಾಗಿ ಆಗ ಅಂತ.

*　　*　　*　　*

ರಾಜಭವನದಲ್ಲಿ ಹಣ್ಣಿನ ತೋಟ ಬೆಳಸುತ್ತಾರಂತೆ.

—ಬೆಣ್ಣೆಯೇನೋ ಬಂದವರಿಂದ ಸರಬರಾಜಾಗೇ ಬಿಡುತ್ತಲ್ಲ ಅಲ್ಲಿ.

*　　*　　*　　*

ಬೊಂಬಾಯಿನ ಆರೇ ಕೇಂದ್ರದಿಂದ ಬಂದ ಹಾಲಿನ ಶೀಷೆಯೊಂದರಲ್ಲಿ ಇಲಿಯೊಂದು ಸಿಕ್ಕಿತ್ತಂತೆ.

—ಗಣೇಶಭವನಕ್ಕೆ ಮೀಸಲಾದ ಹಾಲಿನ ಶೀಷೆ ಇದ್ದಿರಬೇಕು!

*　　*　　*　　*

ಕೃತಕದಂತಪಂಕ್ತಿ ಧರಿಸಿದ, ಕೃತಕ ನಗೆಯನ್ನು ಹೂಡಿದ ಪಶುವೈದ್ಯನು ಹಸುವಿನ ಹತ್ತಿರ ಕೃತಕ ಗರ್ಭಾಧಾರಣೆ ಮಾಡಿಸಲು ಹೋದನಂತೆ

*　　*　　*　　*

ನಾಗವೇಣಿ ಎಂದು ಕರೆಯುತ್ತಿದ್ದಾಕೆಯ ನೂತನ ಕೇಶ ಶೃಂಗಾರವನ್ನು ಕಂಡು, ಹಯಾಂತವೇಣಿ ಎಂದು ಕರೆಯಬಹುದಲ್ಲವೇ?

*　　*　　*　　*

ಗೇರುಸೊಪ್ಪೆ ಜಲಪಾತವನ್ನು ತೋರಿಸುತ್ತಿದ್ದ ಅಸಿಸ್ಟೆಂಟ್ ಪ್ರೊಫೆಸರು ಪ್ರವಾಸ ಬಂದಿದ್ದ ವಿದ್ಯಾರ್ಥಿನಿಯರಿಗೆ ಹೇಳಿದರಂತೆ.

—ಒಂದೆರಡು ನಿಮಿಷ ನೀವು ಮಾತಾಡದೆ ಇದ್ದರೆ. ಜಲಪಾತದ ಘೋರ ಭೋರ್ಗರೆಯು ಕೇಳಿಸಬಹುದು" ಎಂದು.

*　　*　　*　　*

ದಲೈಲಾಮಾರ ಖಾಸಾ ಶಿಷ್ಯರಾಗಿ ಜಯಪ್ರಕಾಶ್ ನಾರಾಯಣರು ದೀಕ್ಷೆ ತೊಡುತ್ತಾರೆಂಬುದು ಶುದ್ಧ ಸುಳ್ಳಂತೆ.

*　　*　　*　　*

ಬಡಿಯುವ ರೆಕ್ಕೆಗಳಿರುವ ವಿಮಾನವನ್ನು ಅಮೆರಿಕಾದಲ್ಲಿ ತಯಾರಿಸುವರಂತೆ. ಆ ವೇಳೆಗೆ "ಮಲಗು ಮಲಗೆಲೆಗೊಂಬೆ" ಹಾಡುವ ವಿಮಾನವನ್ನು ರಷ್ಯಾದವರು ಸಾಧಿಸಬಹುದು.

ಇದು ಕೇಳಿದ್ದಿರಾ?

ತೋಳಿನ ಮೇಲೆ ಗಾಯಗೊಂಡ ಅಬಲೆಯೊಬ್ಬಳು ಆಸ್ಪತ್ರೆಗೆ ಬಂದಳಂತೆ. ಹೊಸ ವೈದ್ಯ ಬಲು ಕರುಣೆಯಿಂದ ಗಾಯವನ್ನು ಶುಭ್ರಗೊಳಿಸಿ ಮದ್ದಿಟ್ಟು ಕಟ್ಟು ಕಟ್ಟುವಾಗ, ಇದು ಹೇಗಾಯ್ತು ಅರ್ಥವಾಗುವುದಿಲ್ಲ. ದನವು ಕಡಿದಿದ್ದಲ್ಲ, ಬೆಕ್ಕು ಕಚ್ಚಿದ್ದಲ್ಲ. ಯಾವ ಪ್ರಾಣಿ ಕಚ್ಚಿ ಕಟಕಾರಿಸಿದೆಯೋ ಗೊತ್ತಾಗುಲ್ಲ. ಆದರೆ ಕಚ್ಚಿದ ಪ್ರಾಣಿ ಬಲವಾದುದಾಗಿರಬೇಕು. ಮೂಳೆತನಕ ಗಾಯ ಹರಡಿದೆ ಎಂದು ಹೇಳಿದನಂತೆ.

ರೋಗಿ ಆಗ ಮೂಗು ಹಾರಿಸಿ, ಹೇಳಿದಳಂತೆ—ಬಲಶಾಲಿ ಪ್ರಾಣಿಯು ಕಚ್ಚಿದ್ದಲ್ಲ. "ಅಬಲೆ ಅಬಲೆ ಕಚ್ಚಿದ್ದು ತರಕಾರಿ ಮಾರುಕಟ್ಟೆಯಲ್ಲಿ" ಎಂದು.

* * * *

ಹೆಬ್ಬಿ ಗುಬ್ಬಾಲೆಯ ಸಾಹುಕಾರ ಮನೆಗೆ ಬಂದು "ಸಂತೆಗೆ ಹೋಗಿದ್ದೆ ವ್ಯಾಪಾರಕ್ಕೆ, ಬೆಳ್ಳಿ ಹೂ ಕೆತ್ತಿದ ನೆಶ್ಯದ ಡಬ್ಬಿ ಕಳೆದುಕೊಂಡೆ, ಅಯ್ಯೋ!" ಅಂತ ಅಳಲಿಕ್ಕೆ ಶುರು ಹಚ್ಚಿದನಂತೆ.

ಮನೆಯಾಕೆ ಕೇಳಿದಳಂತೆ, ಕಿಸೆ ಅಂಗಿಯ ಬಲಗಡೆ ಇಳಿಜೋಬಿನಲ್ಲಿ ಹುಡುಕಿದಿರಾ ಅಂತ. "ಹ್ನೂ ಅಲ್ಲಿಲ್ಲ" ಎಂದನಂತೆ.

ಎಡಗಡೆ ಇಳಿ ಜೋಬಿನಲ್ಲಿ ಹುಡುಕಿದಿರಾ ಎಂದು ಕೇಳಿದಳಂತೆ ಸಾಹುಕಾರಿಣಿ ಅಲ್ಲೂ ಇಲ್ಲ ಎಂದು ತಲೆಯಾಡಿಸಿ ಅಳುತ್ತಲೇ ಇದ್ದನಂತೆ.

ಸೊಂಟದಲ್ಲಿರುವ ಹಣದ ಪಟ್ಟೆಯಲ್ಲಿ। ಇದೆಯೇ ಹುಡುಕಿದಿರಾ ಎಂದಳಂತೆ ಆಕೆ.

ಹ್ನೂ ಕಣೆ, ಅಲ್ಲೂ ಹುಡುಕಿದೆ. ಅಲ್ಲೂ ಇಲ್ಲ ಎಂದು ಬಿಕ್ಕಳಿಸಿ ಅತ್ತನಂತೆ.

ಕೈ ಚೀಲದಲ್ಲಿ ನೋಡಿದಿರಾ ಎಂದಳಂತೆ ಆಕೆ.

ಮೂರು ಮೂರು ಸಾರಿ ಹುಡುಕಿದೆ. ಸಾಲದ ಪತ್ರಗಳು ಮಾತ್ರ ಇದೆ ಅಂದನಂತೆ.

ಮನೆಯಲ್ಲೇ ಮರೆತಿದ್ದೀರಾ ಅಂದ್ರೆ ಎಂದು ಕಾತುರತೆಯಿಂದ ಕೇಳಿದಳಂತೆ.

ಅರ್ಧ ಗಂಟೆ ಹುಡುಕಿದೆ. ಮೂರು ಹಳೇ ಲೇಖನಿ ನಿಬ್ಬುಗಳು ಸಿಕ್ಕಿದವು ಅಷ್ಟೇ ಅಂತ ಕಣ್ಣೊರಸಿಕೊಂಡನಂತೆ, ಷಾಯಗಾಮಿ ಪಂಚೆಯ ಅಂಚಿನ ತುದಿಯಿಂದ.

ಆಕೆ ಸುಮ್ಮನೆ ಇದ್ದಳಂತೆ.

ಆಗ ಆತ ಮುಂಡಾಸಿನ ಪದರದಲ್ಲಿ ಮಾತ್ರ ಹುಡುಕಲಿಲ್ಲ ಇನ್ನೂ ಎಂದನಂತೆ.

ಆಗ ಆಕೆ ಬಿರುಸಿನಿಂದ ಹೇಳಿದಳಂತೆ.

ಮುಂಡಾಸು ಹುಡುಕಬೇಡಿ ಅಂದ್ರೆ. ಅಲ್ಲೂ ಇಲ್ಲದೆ ಇದ್ದರೆ, ನನ್ನ ಕುಂಕುಮ ಅಳಿಸಿ ಹೋಗಬಹುದು—ದಯವಿಟ್ಟು ಹುಡುಕಬೇಡಿ ಅಂದ್ರೆ ಅಂತ.

ಸ್ವತಂತ್ರಪಕ್ಷದ ಗಾದೆ, ವಚನಗಳು

ಏನೇ ಮೇರಿ ತಾರಾಟ ಅಂದರೆ
ರಾಜಾಜಿ ಮನೆಯಲ್ಲಿ ದೇವರೂಟ.

* * * *

ರಂಗಾ ! ನಿನ್ನ ಬೆನ್ನಿಗೆ ಬಿದ್ದ ಶ್ರೀಮಂತರೆಲ್ಲರ
ಸಂಗ ಸುಖವಿತ್ತು ಕಾಪಾಡಯ್ಯ ಎನ್. ಜಿ. ರಂಗಾ

* * * *

ಕಮ್ಯೂನಿಸ್ಟ್ ಕುಂಟನಿಗೆ ಎಂಟು ಚೇಷ್ಟೆ,
ಕಾಂಗ್ರೆಸ್ ಕುರುಡನಿಗೆ ನಾನಾ ಚೇಷ್ಟೆ !

* * * *

ಬಡ ರೈತನಿಗೆ ಇಜ್ಜೋಡಿ ನಾಯಕರಂತೆ.

* * * *

ಸಾವಿರ ರೂಪಾಯಿ ಪಿಂಚಣಿದಾರನಾದರೂ
ಖದ್ದರ್ ಟೋಪಿಯ ಕಾಸ್ದಾರ.

* * * *

ಒಂದಲ್ಲಾ ಮಗಳಿಗೆ, ತನ್ನದೆಲ್ಲಾ ತಂದೆ ಬೇನೆ!

* * * *

ಕಪ್ಪೆ ಸರ್ಪ ನೆಳಲಲ್ಲಿ ಇಪ್ಪಂತೆ ನಮಗಾಯಿತಯ್ಯ ! ಅಕಟಕಟ,
ನಾಗಪುರದ ನೆರಳಲ್ಲಿ ಬಾಳು ಶೂನ್ಯವಲ್ಲವೇನಯ್ಯ
ತಂದೆ ಸ್ವತಂತ್ರದೇವಾ, ಇದ ತಪ್ಪಿಸಿ ನಮಗೆ ದಾರಿ ತೋರಯ್ಯಾ !

* * * *

ಹುತ್ತವ ಬಡಿದೊಡೆ ಹಾವು ಸಾಯಬಲ್ಲುದೇ ಅಯ್ಯ
ತೀವ್ರಕಾಯಕ ಮಾಡಿದರೇನು, ಪತ್ರಿಕೆಗಳಲ್ಲಿ ಬರೆದೊಡೇನು
ಅಸೆಂಬ್ಲಿಗಳಲ್ಲಿ ಅಧಿಕ ಸಂಖ್ಯೆಯಲಿಲ್ಲದೊಡೆ ದೇವ ಕೇಳನಯ್ಯಾ

* * * *

ಪರತಂತ್ರ ನಮಗೆ ಬೇಡಯ್ಯಾ ! ಸ್ವತಂತ್ರ ನಮಗೆ ಸಾಕಯ್ಯ
ಕೊಡಿಟ್ಟ ಧನವೆಲ್ಲಾ ದೇಶಕ್ಕೆಂದೆ ಮೀಸಲಾಗಿಸುವೆವಯ್ಯಾ
ಓಟಿಗರು ಒಲಿವರೋ ಒಲಿಯರೋ ಎಂಬ ಚಿಂತೆ ಹಾಸಲುಂಟು
ಹೊದೆಯಲುಂಟು.

ಕೊರವಾವಲೋಕನ

"ಅಜ್ಜ ಸೊಳ್ಳೆ ಮೊಮ್ಮಗನೊಂದಿಗೆ ಮಾತಾಡುತ್ತಿತ್ತಂತೆ" ಎಂದು ಶುರು ಮಾಡಿದ ಕೊರವ ಆಷಾಢ ಮಾಸ ಕೃಷ್ಣ ಚತುರ್ದಶಿಯ ಸಂಜೆ, ಮೂರು ನವ್ಯ ಧೈರ್ಯವಂತ ತರುಣಿಯರು, ನಾಲ್ಕು ಶ್ರೀಮಂತ ಹುಡುಗರು ಅವಸು ಕೂತಿದ್ದ ಮೇಜಿನ ಬಳಿ ಬಂದು ಕೂತು ಹಲೋ ಪಾಪ್ ಅಂತ ಸದರದಿಂದ ಹೇಳಿದಾಗ.

ಮೊದಲನೆ ಧೈರ್ಯದುಡುಪು ಧರಿಸಿದ ತರುಣಿ ಕೇಳಿದಳಂತೆ.

"ಏನಜ್ಜಾ, ಅಡುಗೂಲಜ್ಜನ ಕತೆ ಹೇಳ್ತೀಯಾ ನಮಗೆ ನಿದ್ದೆ ಬರಲು ಅಂತ" ಎಂದು

"ನಿದ್ದೆ ಬರದೆ ಇರೋಹಾಗೆ ಕತೆ ಹೇಳಿ ಕೆರಳಿಸಬೇಕೂಂತ, ತಾಯಿ" "ಅಂತ ಕೊರವ ಹೇಳಿ ಮುಂದುವರೆದ.

"ಅಜ್ಜ ಸೊಳ್ಳೆ ಹೇಳಿದನಂತೆ, "ಮೊಮ್ಮಗಾ! ನಿಮ್ಮ ಪುಣ್ಯವೇ ಪುಣ್ಯ ಈಗಿನ ಕಾಲದಲ್ಲಿ. ಚೆಂದದ ಬಾಳು ನಡೆಸಿ ಮೋಜಿನ ಜೀವನ ನಡೆಸಬಹುದು" ಅಂತ

"ಏನು ಸುಖವೋಪ್ಪಾ! ಏನು ಪುಣ್ಯವೋಪ್ಪಾ ನಮಗೆ ಈಗ. ಎಲ್ಲೆಲ್ಲಿ ಹೋದರೂ ಡಿ. ಡಿ. ಟಿ. ಹೊಡೆದಿರುತ್ತಾರೆ ಬದುಕುಕ್ಕೆ. ಆಗುಲ್ಲ. ಕಡೆಗೆ ಕೆರೆಗಾದರೂ ಹೋಗೋಣ ಅಂದರೆ ಪೈರೀಥ್ರಂ, ಬ್ರಿಲಿಯಂಟ್‌ಗ್ರೀನ್ ಪಸರಿಸುತ್ತಾರೆ. ಈಗೀಗ ವಿಮಾನಗಳಿಂದ ನಮ್ಮವಂಶ ನಾಶಕ ವಸ್ತುಗಳನ್ನು ಗಾಳಿಯಲ್ಲಿ ದೇಶದ ಮೇಲೆಲ್ಲಾ ತೂರುತ್ತಾರೆ. ಬಾಳುಕ್ಕೆ ಸ್ಥಳವಿಲ್ಲ. ಬದುಕುಕ್ಕೆ ಎಡೆಯಿಲ್ಲ" ಎಂದು ಮೊಮ್ಮಗ-ಸೊಳ್ಳೆ ಕೊರಗಿ ನುಡಿಯಿತಂತೆ.

ಅಜ್ಜ ಸೊಳ್ಳೆ ಹೇಳಿತಂತೆ "ಇರಬಹುದು ಆದರೆ ನಮ್ಮ ಕಾಲದಲ್ಲಿ ಯಾವಳನ್ನಾದರೂ ಮುತ್ತಿ ಕಚ್ಚಬೇಕೆಂದರೆ ಬರೀ ಕಾಲು, ಅಂಗೈ, ಮುಖ ಸಿಕ್ಕುತಿತ್ತು. ಆದರೆ ನಿಮಗೆ ಈಗ, ಎಂಥೆಂಥಾ ಅವಕಾಶವಿದೆ, ಏನೇನು ಮೋಜೆಲ್ಲಾ ಉಂಟು!"

* * * *

ಮಳೆ ಅಂದರೆ ಅಂತ ಇಂತ ಮಳೆ ಅಲ್ಲ; ಭಾರೀ ಮಳೆ ದಿನವೆಲ್ಲಾ ಬಿತ್ತಲ್ಲಾ ಆ ಸಂಜೆ ಕ್ಲಬ್ಬಿನಲ್ಲಿ ಕೊರವ ತುದಿಮೇಜಿನ ಬಳಿ ಕುಳಿತಿದ್ದ, ಒಂಟಿಯಾಗಿ.

ಅರವಾವೊದ್ದು ಕಾಲು ಝಾಡಿಸಿಕೊಂಡು ಕಾರಿಂದ ಬಂದಿಳಿದ ಕ್ಲಬ್ಬಿಗೆ. ಮದುವೆ ಸೂಟು ಧರಿಸಿದ್ದ. ಅಮೆರಿಕಾ ನೆಕ್‌ಟೈ ಹಾಕಿದ್ದ. ಆದರೆ ಕಾಲು ಕಾಲಲ್ಲ! ಪಾದ, ಬೆತ್ತಲೆ. ಬಂದವನೇ ಕೊರವನ ಮೇಜಿನ ಬಳಿ ನಡೆದು ಕುಳಿತ

ಕೊರವನ ಕಣ್ಣೆಲ್ಲಾ ಅರವಾ ಮೊದ್ದುವಿನ ಪಾದಗಳಮೇಲೇನೆ. ಆ ನೋಟದ ಕಾವಿಗೆ ಅರವಾಮೊದ್ದುವಿನ ಅಂಗಾಲು ಬೆಚ್ಚಗಾಯಿತು. ಪಾದ ಕಾವೇರಿತು.

ಅರವಾಮುದ್ದು ಕಾರಣ ಹೇಳಲು ಶುರು ಮಾಡಿದ. "ನೋಡೋ ಕೊರವ ಛಳಿಅಂತ ಬೆಚ್ಚಾನೆ ಸೂಟು ಹಾಕಿಕೊಂಡೆ. ಕಾಲ್ಚೀಲ ಹಾಕಿಕೊಂಡೆ. ಏನೋ ಮುಲ ಮುಲ ಅಂತು. ಕಾಲಿನ ಮೇಲೆ ಕಾಲ್ಚೀಲದಲ್ಲಿ ಓಡಾಡ ಹತ್ತಿತು. ಬೆದರಿ ಬೇಗ ಕಾಲ್ಚೀಲ ತೆಗೆದೆ. ಒಂದು ಧಡೂತಿ ಜಿರಲೆ ಇತ್ತು. ನನ್ನ ಗಲಾಟೇಲಿ ಅದಕ್ಕೆ ಅರ್ಧ ಪ್ರಾಣವಾಗಿತ್ತು. ತಿರುಗಿ ಹಾಕಿಕೊಳ್ಳಲು ಬೇಜಾರಾಯ್ತು. ಹೇಗೂ ಮಳೆ. ಷೂ ಹಾಕಿಕೊಂಡರೆ ಮಣ್ಣು ಮೆತ್ತುತ್ತೆ. ಬರಿ ಕಾಲಾದರೆ ಸುಲಭವಾಗಿ ತೊಳೆದುಕೊಳ್ಳಬಹುದು ಅಂತಂದ.

"ಅಂದ ಹಾಗೆ ಒಬ್ಬನೇ ಏನು ಯೋಚಿಸುತ್ತಿದ್ದೆ." ಎಂದ ಅರವಾಮೊದ್ದು.

"ಈಗಲೇ ನೋಡು ಸ್ವತಂತ್ರವಾಗಿ ಒಬ್ಬಂಟಿಗನಾಗಿ ಇನ್ನೊಬ್ಬರ ಪರತಂತ್ರಕ್ಕೆ ನೀ ಬರುವತನಕ ಸಿಗದೆ ಸುಖವಾಗಿ ಈ ಕ್ಲಬ್ಬಿನಲ್ಲಿದ್ದೆ. ಸಂಜೆಗನಸು ಕಾಣುತ್ತಿದ್ದೆ" ಎಂದ ಕೊರವ.

"ಸ್ವತಂತ್ರ ಪಕ್ಷಕ್ಕೆ ಸೇರಿಕೊಂಡೆ ನಾನು. ಇಲ್ಲದಿದ್ದರೆ ನಮಗೆ ಉಳಿವಿಲ್ಲ" ನೀನೂ ಸೇರಿಕೋಬೇಕು, ಜನಕ್ಕೆ ಜನ ಸೇರಿದರೆ ಜಾತ್ರೆ" ಎಂದ ಅರವಾಮೊದ್ದು.

"ಅದ್ಯಾಕೋ ಅಷ್ಟು ಜಿರಳೆ ಸೇರಿಕೊಂಡಿತು, ನಿಮ್ಮನೆಯಲ್ಲಿ ಕಾಲ್ಚೀಲ ಕೂಡ ಬಿಟ್ಟಿಲ್ಲ" ಅಂತ ಕೊರವ ಮಾತು ಹೊರಳಿಸಿ ಕೇಳಿದ.

ನೋಡು ಕೊರವ ಯಾಕೆ ಅಂತ ಹೇಳುಕ್ಕೆ ಬರುಲ್ಲ. ಆದರೆ ಮನೆ ತುಂಬಾ ಕೆಂಚಿರುವೆ ಸೇರಿಕೊಂಡುಬಿಟ್ಟಿತ್ತು. ನನ್ನ ಹೆಂಡತಿ ಮನೇಲೆಲ್ಲಾ ಡಿ. ಡಿ. ಟಿ. ಮಳೆಗರೆದಳು. ಹದಿನೈದು ದಿನ ಇರುವೆ, ಕ್ರಿಮಿ ಕೀಟ ಒಂದೂ ಇರಲಿಲ್ಲ. ಆದರೆ ಅಷ್ಟೂ ದಿವಸ ಮನೆಯೆಲ್ಲಾ ದುರ್ನಾತ ತುಂಬಿತ್ತು. ರಾತ್ರಿ ಮನೆಗೆ ಹೋದಾಗ ಗೊತ್ತಾಗುತ್ತಿರಲಿಲ್ಲ. ಬೆಳಿಗ್ಗೆ ಎದ್ದಾಗ ಅಮಲಿಳಿದಾಗ ದುರ್ನಾತ ಮೂಗಿಗೆ ಗೋಚರವಾಗಿತ್ತು. ಈಗ ಒಂದು ವಾರದಿಂದ ಎಲ್ಲೆಲ್ಲೂ ಜಿರಳೆಗಳ ಹಾವಳಿ ಹೆಚ್ಚಾಗಿದೆ. ಎಂತಹಾ ಜಿರಳೆಗಳು ಅಂತೀ! ಡಿ. ಡೀ. ಟಿ ಮೇಲೆ ಬೆಳೆದು ಬಂದ ಜಿರಳೆಗಳು." ಎಂದ ಅರವಾಮೊದ್ದು.

"ಅದೇ ನೋಡು ಜೀವನದ ಮರ್ಮ" ಅಂದ ಕೊರವ

ಅರವಾಮೊದ್ದುವಿನ ಪಾದದ ಬೆರಳುಗಳೆಲ್ಲಾ ಥರಥರಿಸಿದುವು. ಅರ್ಥವಾಗದ ಕಾರಣ. ಕೊರವ ವಿಶದೀಕರಿಸಿದ.

"ನೋಡು ಅರವಾಮೊದ್ದು ಇರುವೆ ಹೆಚ್ಚಾದರೆ ಜಿರಳೆ ಸಂತಾನಕ್ಕೆ ಅಪಾಯ. ಇರುವೆ ನಾಶವಾದರೆ ಜಿರಳೆಗೆ ಸ್ವರ್ಗ. ಇದೇ ಜೀವನ ನಿಯಮ ಪ್ರಕೃತಿಯಲ್ಲಿ.

ರಾಜಕೀಯದಲ್ಲಿ ಕೂಡ ಅಷ್ಟೇ ! ಒಂದು ಪಕ್ಷ ಮಿತಿಮೀರಿದರೆ ಇನ್ನೊಂದು ಪಕ್ಷ ಹುಟ್ಟಿ ಹೊರವಾಗಿ ಬೆಳೆಯುತ್ತೆ.

"ಇರುವೆಯಾದರೇನು ಜಿರಳೆಯಾದರೇನು. ಇಳಿಯಾ ಮುಳುಗಿದ ನನ್ನಂತಹವನಿಗೆ, ಅದಕ್ಕೇ ರಾಜಕೀಯ ನನಗೆ ಬೇಡ, ಜನ ಬೇಕು." ಎಂದ ಕೊರವ.

ಆ ವೇಳೆಗೆ ಬೇರರ್ ಪ್ರತ್ಯಕ್ಷನಾದ.

ಮಾತನಾಡಿ ಗಂಟಲೊಣಗಿಸಿಕೊಂಡಿದ್ದ ಇಬ್ಬರೂ ತಂಪಾಗಲೆತ್ನಿಸಿದರು.

* * * *

ಧರ್ಮ ರತ್ನಾಕರರು ಕ್ಲಬ್ಬಿಗೆ ಶನಿವಾರ ಬಂದಾಗ ಇನ್ನೂ ಸಂಧ್ಯಾ ಐದೇ ಗಂಟೆ. ಯಾರೂ ಇದ್ದಿಲ್ಲ. ಸಂಜೆ ಆರೂವರೆ ಗಂಟೆಗೆ ಅವರು ಹೊರ ಹೊರಡುತ್ತಿರುವಾಗ, ಮಿಕ್ಕೆಲ್ಲಾ ಸದಸ್ಯರೂ ಕ್ಲಬ್ಬಿಗೆ ತುಟಿಮೇಲೆ ನಾಲಿಗೆ ಸವರುತ್ತಾ ಬಂದರು. ಮೇಳಗೀತ ಹಾಡಿದಂತೆ "ಏನು ಧರ್ಮ ರತ್ನಾಕರರೇ ಇಷ್ಟು ಬೇಗ ಸೂರ್ಯ ಮುಳುಗುವ ಮೊದಲೇ ಕ್ಲಬ್ಬು ಬಿಟ್ಟು ಹೊರಡುತ್ತಿದ್ದೀರಿ" ಎಂದು ಎಲ್ಲರೂ ಒಕ್ಕೊರಲಿನಿಂದ ಕೇಳಿದರು. ಅವರೆಲ್ಲರೂ ಕುದುರೆ ಜೂಜಿನಿಂದ ಸುಸ್ತಾಗಿ ತೌರು ಮನೆಗೆ ಬಂದಂತೆ ಕ್ಲಬ್ಬಿಗೆ ಹಿಂತಿರುಗಿದ್ದರು ಅದೇ ಮುಹೂರ್ತದಲ್ಲೇ !

ಧರ್ಮ ರತ್ನಾಕರರ ಮುಖದ ಮೇಲೆ ಸ್ವಾಗತದ ನಗೆ ಹರಡಿತ್ತು. ಅವರ ಡ್ರೈವರು ಮೆಲ್ಲಗೆ ಅವರನ್ನು ಕಾರಿನಲ್ಲಿ ಕೂರಿಸಿಕೊಂಡು ಹೊರಟೇಹೋದ.

ಬರುತ್ತಿದ್ದವರೆಲ್ಲಾ ಮನೆ ಲೆಕ್ಕಮಾಡುವ ಹುಡುಗ ಹುಡುಗಿಯರಂತೆ ಸತ್ತ ಸೋತ ಕುದುರೆ ಜಾತಕ ಅದರ ಫಲ, ಭವಿಷ್ಯ ಲೆಕ್ಕಹಾಕುವ ಸಡಗರದಲ್ಲಿ ತೊಡಗಿದರು.

ಸೋಮವಾರ ಸಂಜೆ ಕ್ಲಬ್ಬಿನಲ್ಲಿ ಮೋಜೇ ಮೋಜು. ಕಾರಣ ಹಿಂದಿನ ದಿನ ಸದಸ್ಯನೊಬ್ಬ ಇಪ್ಪತ್ತು ಸಹಸ್ರಗೆದ್ದಿದ್ದ. ಆತನಕ ಅವ ಕಳೆದುಕೊಂಡಿದ್ದು ಅವನಿಗೂ ಅವನ ಹೆಂಡತಿಗೂ ಗೊತ್ತಿರಲಿಲ್ಲ. ಅವ ಇಂದು ಸಂಜೆ ರಾಮನವಮಿ ಊಟ ಏರ್ಪಡಿಸಿದ್ದ, ಕ್ಲಬ್ಬಿನ ಸದಸ್ಯರೆಲ್ಲರಿಗೂ ತೆರೆದ ಮನೆ ಓಪನ್ ಹೌಸ್ ಅಂತಾರಲ್ಲ ಆ ರೀತಿ.

ಸಂಧ್ಯಾಕಾಲ ಸೂರ್ಯ ಮುಳುಗಿದ್ದ ಸೋಮವಾರ. ಚಂದ್ರ ಮುಖಿಯರು ಇನ್ನೂ ಮುಖ ತೋರಿರಲಿಲ್ಲ.

ಗೆದ್ದವ ಕ್ಲಬ್ಬಿಗೆ ಬಂದ, ಬಲಗೈಯಲ್ಲಿ ಒಂದು ಇನಾಮಲ್ ಬಕೇಟು ಎಡಗೈಯಲ್ಲಿ ಒಂದು ಕಡಿವಾಣ. ಕಡಿವಾಣದ ಹಿಂದೆ ಕಪ್ಪಂ ಕಪ್ಪು ಕುದುರೆ. ಬಂದವ ಬಕೆಟ್ಟನ್ನು ನೆಲದ ಮೇಲಿಟ್ಟ. ಬೇರರುಗಳು ಬಂದರು. ಶಿಷೆಗಳನ್ನು P O P ಮಾಡಿಸಿ ಬಕೆಟನ್ನು ತುಂಬಿದರು. ತುಂಬಿದ ರಭಸಕ್ಕೆ ನೊರೆ ಬಕ್ಕೆಟ್ಟನಂಚಿನಾಚೆ ನೆರೆಕೂಡಿ ಹರಡಿತು, ನೆಲ ತೋಯ್ದಿತು. ಗೆದ್ದವ ಎಡಗೈಯನ್ನು ಬಗ್ಗಿಸಿದ. ಕುದುರೆ

ತಲೆ ಬಗ್ಗಿಸಲಿಲ್ಲ. ಬಲಗೈಯನ್ನೆತ್ತಿದ. ಬಕೆಟ್ ಎದ್ದಿತು. ಕುದುರೆಬಾಯನ್ನು ಅದರಲ್ಲಿ ಮುಳುಗಿಸಿದ. ಕುದುರೆ ಉಸಿರಾಡಿದಂತೆ ಕಾಣಲಿಲ್ಲ.

ನಂತರ ಗೆದ್ದವನಿಂದ ಆ ಬಕೆಟ್ಟಿನಿಂದ ನೂರಾರು ಲೋಟಾಗಳನ್ನು ತುಂಬಿದ ನೆರೆದಿದ್ದವರಿಗೆಲ್ಲಾ ಭೂರಿದಕ್ಷಿಣೆಯಂತೆ ಹಂಚಲ್ಪಟ್ಟಿತು.

ಅರವಾಮೊದ್ದು ತೆಗೆದುಕೊಂಡ ಲೋಟಾಗಳ ಸಂಖ್ಯೆ ಎಣಿಕೆ ಹಾಕಿದರೆ, ಅಶ್ವತ್ಥಪ್ರದಕ್ಷಿಣೆಮಾಡಿ ಮಕ್ಕಳ ಲೆಕ್ಕ ಹಾಕಿದಹಾಗೆ, ಅರ್ಧ ಬಕೆಟ್ಟು ಅವನ ಹೊಟ್ಟೆ ಸೇರಿರಲೇಬೇಕು.

ಅರವಾಮೊದ್ದು ಮಾತಾಡಿದ. ನಕ್ಕ. ಹೇಳಿದ್ದೆ ಹೇಳಿದ ತೊದಲಿದ ಆಗ ಅಸೆಂಬ್ಲಿಯಲ್ಲಿ ತಿಂಡಿಯ ಗಂಟೆ ಹೊಡೆದಂತೆ, ಕ್ಲಬ್ಬಿನಲ್ಲಿ ಊಟದ ಗಂಟೆ ಬಾರಿಸಿತು ಎಲ್ಲರೂ ಊಟಕ್ಕೆದ್ದರು. ಅರವಾಮುದ್ದುವನ್ನೂ ಅಪ್ಪಿತಂದು ಊಟಕ್ಕೆ ಕೂರಿಸಿದರು.

ಊಟ ಹೇಗಾಯ್ತೋ, ಏನಾಯ್ತೋ, ಯಾರಿಗಾಯ್ತೋ, ದೇವರೇಬಲ್ಲ. ಆದರೆ ಅರವಾಮೊದ್ದು, ಆಶೀರ್ವಾದಕ್ಕೆ ಅರವಾಮೊದ್ದು" ಎಂಬ ಗುಲ್ಲು ಎದ್ದಿತು. ಕಾರಣ ಊಟ ಮುಗಿದಿತ್ತು. ಅನ್ನದಾತನ ಆಶೀರ್ವಾದ ಭಾಷಣಗಳು ಆಗಬೇಕಿತ್ತು. ಭಾಷಣಮಾಡಲು ಸಮರ್ಥರಲ್ಲ ಎಂದು ಎಲ್ಲರಿಗೂ ತಿಳದಿದ್ದಾದ ಕಾರಣ, ಮೊಸಳೆ ಬಾಯಿಗೆ ಸಿಕ್ಕಿಕೊಂಡ ಗಜೇಂದ್ರರಂತೆ, ಈ ಗುಟ್ಟು ತಿಳಿಯದ ಅರವಾಮೊದ್ದುವನ್ನು ಎಲ್ಲರೂ ಪ್ರಾರ್ಥಿಸುತ್ತಿದ್ದರು.

ಅರವಾಮೊದ್ದು ಎದ್ದು ತಿರುಗಿ ಕುರ್ಚಿಯ ಮೇಲೇ ಬಿದ್ದು ಆಶೀರ್ವಾದ ಭಾಷಣ ಮಾಡಿದ. "ಮೊನ್ನೆ ಸಂಜೆ ಸ್ಟೇಷನ್ನಿಗೆ ಕ್ಲಬ್ಬಿನಿಂದ ಹೋಗುವಾಗ ಎದುರುಬಂದವರನ್ನು ಹಲ್ಲೋ ಮಾಡಲಾಗಲಿಲ್ಲ. ಅವತ್ತು ನನ್ನ ಮಗಳು ಮೊದಲ ಸಾರಿಗೆ ಅತ್ತೆಮನೆಯಿಂದ ತೌರಿಗೆ ಬರುತ್ತಿದ್ದಳು. ಕರೆತರಲು ಸ್ಟೇಷನ್ನಿಗೆ ಹೋಗುತ್ತಿದ್ದೆ. ಮನೆಗೆ ಹೋದಕೂಡಲೇ ಮಗಳು ತಾಯಿಯ ಹತ್ತಿರ ಅತ್ತಳು "ಮದುವೆಯಾದರೆ ಸ್ವರ್ಗ ಅಂತ ಅಂದೆ ಅಮ್ಮಾ. ಆದರೆ ಅವರಿಗೆ ಸ್ವರ್ಗ ನರಕ ಇವುಗಳಲ್ಲಿ ನಂಬಿಕೆಯೇ ಇಲ್ಲ ಅಂತ" ಅತ್ತಳು. ಆಗ ನನ್ನಾಕೆ ಏನಂದಳು ಗೊತ್ತೆ? ಈ ಸಾರಿ ನೀನು ಗಂಡನ ಮನೆಗೆ ಹೋಗುವಾಗ ನಾನೂ ಬರ್ತೀನಿ. ನಿನ್ನ ಜತೇನೆ ಇರ್ತೀನಿ. ನಿನ್ನ ಗಂಡನಿಗೆ ನರಕ ಅಂದರೆ ಏನು ಅಂತ ತೋರಿಸ್ತೀನಿ ಎಂದಳು.

ಆಕೆ ಮಗಳ ಜತೆ ಹೋಗ್ತಾಳೆ, ಇವನಿಗೆ ಜೂಜಿನಲ್ಲಿ ಈಗ ಆದಹಾಗೇ ಗೆಲುವು ಬರಲಿ. ನಾವೆಲ್ಲಾ ಸುಖವಾಗಿರೋಣ. ಇಂತಹ ಪುಣ್ಯಶಾಲಿಗೆ ಆಶೀರ್ವಾದ ಬಿಕ್ಕಳಿಸೋಣ.

"ಎತ್ತಿರಿ ಲೋಟಾ" ಎಂದು ಅರಿಚಿದ ಅರವಾಮೊದ್ದು ಲೋಟಾಗಳನ್ನು ಎತ್ತಿಳಿಸಿದ್ದಾಗ ಅರವಾಮೊದ್ದು ಪಿಸುಮಾತಿನಲ್ಲಿ "ಅಯ್ಯೋ ಪಾಪ! ಅಳಿಯನ ಭವಿಷ್ಯ ಜ್ಞಾಪಿಸಿಕೊಂಡರೆ ಅಳು ಬರುತ್ತೆ" ಅಂತ ಹೇಳಿ ಅಳುಕ್ಕೆ ಶುರು ಹಚ್ಚಿದ.

ಪಿ ಪಿ !

ಟೂ—ಟೂ! ಅಂದರೆ ನಿಮಗೆ ಗೊತ್ತಾಗುತ್ತಲ್ಲ. ಪೀಪಿ ಎಂದರೆ ಏಕೆ ನಿಮಗೆ ಗೊತ್ತಾಗುಲ್ಲ! ಇಷ್ಟು ವಯಸ್ಸಾಗಿದೆಯಲ್ಲ! ಬೇಕಾದರೆ ತುಮಕೂರು ಗಾಡಿ ಹತ್ತಿ ಕೇಳಿ ಪಿ ಪಿ ಎಂದರೆ ಏನು ಅಂತ. ಸಾಮಾನ್ಯವಾಗಿ ಡಬ್ಬಿಯಲ್ಲಿ ಪ್ರತಿಯೊಬ್ಬನೂ ಪಿ ಪಿ ಆಯಿತೆ ಪಿ. ಪಿ. ಆಯಿತೆ ಎಂದು ಕೇಳುತ್ತಾನೆ! ಎಲ್ಲರೂ ಇಲ್ಲ ಇಲ್ಲ ಎಂದು ತಲೆ ಆಡಿಸುತ್ತಾರೆ! ನಿಮಗೆ ಈಗ ಆಗುತ್ತಿರುವಷ್ಟೇ ಸಂಕಟ ಕೋಪ ನನಗೂ ಆಯಿತು. ತಲೆ ಕೆರೆದುಕೊಂಡು ನಾನೂ ಒದ್ದಾಡಿದೆ!

ಬಹಳ ದೊಡ್ಡ ಮನುಷ್ಯರಂತೆ ಕಂಡರು. ಕೆನ್ನೆಗಳೋ ಬಲೂನಯ! ಚಿಕ್ಕ ಛಾಣಾವರದಲ್ಲಿ ಕ್ಷೌರ ಮಾಡಿಸಿಕೊಂಡಂತಿದೆ! ಇವರಿಗೇಕೆ ಸಣ್ಣ ಮಕ್ಕಳ ಕಾಡಿ ಬೇಡುವ ಪೀಪಿ! ವಾಲಗ ಊದಬಾರದೆ! ಡೋಲು ಬಜಾಯಿಸಬಾರದೆ! ಯಾವ ರಾಜಕೀಯದ ಹಿನ್ನೆಲೆ ಇದು? ಕೆಂಪೋ! ಕಪ್ಪೋ! ಅರ್ಥವಾಗಲಿಲ್ಲ!—ತಲೆ ಕೆರಳಿ ಕೇರಳ ಆಯ್ತು. "ಚುನಾವಣಿ" ಜ್ಞಾಪಕಕ್ಕೆ ಬಂತು! ಅಂದಮೇಲೆ ಜಟಕವೂ....ಸಾಬಿಯೂ....

*ಹತ್ತು ಸಾವಿರ ನುಂಗಿಬಿಟ್ಟರಪ್ಪ ನಮ್ಮೂರು ವಿವಿಧ ಸೈಸೈಟಿ ಅಧ್ಯಕ್ಷರು" ಎಂದು ಮೂಲೆಯಲ್ಲಿ ಕೂತಿದ್ದ ಕೆಂಪು ಟೋಪಿಯ ಯಂಗ್ ಫಾರ್‌ಮರ್‌ರು ಶ್ರೀರಾಮ ಜಪ ಮಾಡುತ್ತಿದ್ದ. ತುಮಕೂರುವರಿಗೂ ಎರಡು ಸಾವಿರ ಸಲ ಜಪ ಮಾಡಿದ. ನಿತ್ಯವೂ ಹೀಗೆಯೇ ಅಂತ ಅವನ ಕೆಲಸ. ಅವನ ಸಂಬಳ ತಿಂಗಳಿಗೆ ಅರವತ್ತಂತೆ!...."ಕೋಮಲ ಕಾಯನು ಮೂಡ್ಲಗಿರಿ" "ಸುಂದರ ಕಾಯನು ಮೂಡ್ಲಗಿರಿ" ಎಂದು ಪಲ್ಲವಿ ಹಾಡಿಕೊಂಡು ಎದ್ದ ಕುರುಡನೊಬ್ಬ ಸೀಟಕೆಳಗೆ!—ಡಬ್ಬಿ ಚರ್ಚೆ ಸ್ವಾರಸ್ಯವಾಗಿ ಸಾಗುತ್ತಿತ್ತು—ತುಮಕೂರು ಎಕ್ಸ್‌ಪ್ರೆಸ್ಸಿನಲ್ಲಿ....ನಾನೂ ಹಚ್ಚಿದೆ—ಬೀಡಿಯನ್ನು, ಹರಟೆಯನ್ನೂ! ನವೀನ ವಾಕ್ಯರಚನೆಯನ್ನು!

"ದಲೈಲಾಮ ಟಿಬೆಟ್ಟಿನಿಂದ ೨೦ ಪೆಠಾರಿ ತುಂಬ ಚಿನ್ನದ ಗಟ್ಟಿ ತಂದಿದ್ದಾರಂತೆ! ಅವರು ಇದ್ದ ಕಡೆ ಅವರ ಸರ್ಕಾರ್ ಅಂತೆ! ಮುಖ್ಯ ಮಂತ್ರಿ ಬೇಕಂತೆ, ಪ್ರಧಾನ ಕಾರ್ಯದರ್ಶಿ ಬೇಕಂತೆ! ಉಪಕಾರ್ಯದರ್ಶಿಗಳು ಬೇಕಂತೆ! ರಾಯಭಾರಿಗಳು ಬೇಕಂತೆ, ಮಸ್ಸೂರಿಯಲ್ಲಿ ಭಾರಿ ಪ್ರವಾಹ, ಲಾಮಾರವರಿಗೆ ಈಜು ಬರದು. ಜುಟ್ಟೂ ಇಲ್ಲ ಜನಿವಾರವೂ ಇಲ್ಲ! ಅಲ್ಲಿಗೆ ಹೋಗಿ ಅದೃಷ್ಟದ ಸೂರೆ ಹೊಡೆಯ

ಬಾರದೆ....ಹೋಗುವಾಗ ನಮ್ಮೂರು ಲಾಲ್ ಬಾಗಿನ ಕೃಷ್ಟೆ(ವ್ ಕ್ರೋಟನ್‌ಗಳನ್ನು ತೆಗೆದುಕೊಂಡು ಹೋಗಿ, ಅದರ ಎಲೆ ಶುದ್ಧ ಬೋಳು! ಬಣ್ಣ ಎಣ್ಣೆಗೆಂಪು! ಲಾವು ಲಾವು ಅಂತ ರಷ್ಯನ್ ಭಾಷೆಯ ಥ್ಯಾಂಕ್ಸ್ ಕೊಡುತ್ತೆ! ಮೂಸಿ ನೋಡಿದರೆ ಡಲ್ಲಸ್‌ಗಾದ ಗತಿಯಾಗುತ್ತೆ! ಮಸ್ಸೂರಿಯ ಬಿರ್ಲಾ ಭವನಕ್ಕೆ ಕ್ರೋಟನ್ ತೋರಣ ಕಟ್ಟಿ! ಕೊಡಿ ಒಂದು ಟಾಂಗು! ಮೂವತ್ತೈಯ ಟಾಂಗು!....ಇಲ್ಲೇಕೆ ಪೀಪಿ, ಪೀಪಿ ಅಂತ ಟೋಪಿಗೆ ಸಲಾಮು ಹಾಕುತ್ತೀರಿ" ಎಂದೆ!....ಅವರೆಲ್ಲ ಮನಸಾರೆ ನಕ್ಕರು. ಎರಡು ತಿಂಗಳಿಂದ ನಕ್ಕಿದ್ದೇ ಇಲ್ಲವಂತೆ ಆ ಬಡಪಾಯಿಗಳು!— ಆ ಡಬ್ಬಿ ತುಂಬ ಅವರ ಪರಿವಾರವೇ, ಹಿಂದುಳಿದವರಂತೆ ಅವರು! ಅವರ ಜಾತಿಗೇ ಪಿ ಪಿ ಯಾಗಬೇಕಂತೆ! ನಾಪಿತರೆಲ್ಲ ನಿಯೋಗ ಹೋಗಿದ್ದರಂತೆ! ಪೈಲ್ವಾನರೆಲ್ಲ ತಾರು ಕಳಿಸಿದ್ದರಂತೆ! ಮೆಣಶಿನಕಾಯಿ ಮಂಡಿಯವರು ನ್ಯಾಯಾಂಗ ಸಚಿವರ ಕೊಠಡಿ ಹಿಂದೆ ಖಾಲಿ ಚೀಲಗಳನ್ನು ಒದರಿದರಂತೆ! ನಿಮ್ನವರ್ಗದ ಪ್ರಮುಖ ನಾಯಕರ ಭೇಟಿಯಾಯ್ತಂತೆ! ವಿನೋದ ಸೌಧಕ್ಕೆ ಡಿ. ಡಿ. ಟಿ. ಸ್ಪ್ರೇ ಮಾಡಿ ಎಂದು ಸಚಿವರು ಹುಕುಂ ಕೊಟ್ಟರಂತೆ! ಅದನ್ನು ತಿಂದು ಕೊಬ್ಬಿದ ಜಿರಳೆಗಳು "ಪಿ ಪಿ" ಫೈಲೇ ಇಲ್ಲದಂತೆ ಮಾಡಿದವಂತೆ! ಮುಂದುವರಿದ ಕೋಮಿನ ಗುಮಾಸ್ತರು ಜಾದು ಮಾಡಿ ಎರಡೇ ದಿನಗಳಲ್ಲಿ ಹೊಸ ಫೈಲನ್ನೇ ಬೆಳಸಿದರಂತೆ! ಕೆಲವು ಕೋತಿಗಳು ಸೇರಿಕೊಂಡು ಪಿ ಪಿ ಮಧ್ಯೆ ಬಾಲ ತುರಕಿ ಆಡಿಸಿದವಂತೆ! ರೈಲಿನಲ್ಲೇ ವಾಸವಂತೆ! ಬೆಣ್ಣೆಯಿಲ್ಲ ಖರ್ಚಂತೆ! ನಾಮಧಾರಿಗಳಿಗೆಲ್ಲ ಅದೇ ಖಾಯಂ ಅಂತೆ! ಹಳೆ ಬಿ ಪಿ ಬೇಡ ಅಂದರೂ ಬಿಡೊಲ್ಲವಂತೆ! ರಾಜೀವಪುರದ ಸಚಿವರಿಗೆ ಏನು ಮಾಡಬೇಕೆಂಬುದೇ ತೋಚುತ್ತಿಲ್ಲವಂತೆ....ಇವರಿಗೆ!........

—ಕಾಲಿಗೆ ಲಾಳ ಜಡಿದು, ಬಾಯಿಗೆ ಕಲ್ಲಿದ್ದಲು ತುಂಬಿ ಕಿವಿಗೆ ಕೆಂಪಾಂಬುಧಿ ಜಲ ಸುರಿಯಿರಿ! ಮಂತ್ರಿ ಮಿಸಲಿಯಂತೆ ಅಂತರಗ್ರಹಯಾಟನೆಗೆ ಪ್ರಾರಂಭಿಸುತ್ತಾನೆ! ಇಲ್ಲಿ ಮಿಸಕಾಟ ಇರೋಲ್ಲ! ಎಂದು ಹೇಳಿದೆ.

ಏನು ಈ ಹಾಳು ಪಿ ಪಿ? ಒಳ್ಳೆಯ ಕ್ವಿಸ್ ಆಯಿತಲ್ಲ! ಊರಿಗೆ ಹೋಗಿ ಪಬ್ಲಿಕ್ ಪ್ರಾಸಿಕ್ಯೂಟರ್ ರೇಪಯ್ಯನನ್ನಾದರೂ ಕೇಳಿ ತಿಳಿದುಕೊಳ್ಳಬೇಕು!

—ಹಾ. ರಾ
(ರಾಜೀವಪುರ)

ಹೇಳಿ ಫಲವೇನ್

ರಾಯ :—

ಹಿಂದೆ ವೆಸ್ಟಿಂಡಿಯರ ಕೈಯಲಿ
ತಿಂದು ಙ್ಲಂಡೆಯ ಬಳಿಕ ಭಾರತ
ವೃಂದ ನೆರೆದುದು ದತ್ತು ಗಾಯಕವಾಡನಾಶ್ರಯದಿ
ಮುಂದೆ ಪಯಣವ ಬೆಳೆಸಿ ಯೂ. ಕೆ. ಗೆ
ಛಂದದಲ್ಲಿ ರಬ್ಬರನು ಪಡೆಯಲು
ಬಂದು ಸೇರಿತು ಏನ ಹೇಳುವೆ ನಮ್ಮವರ ಬಲುಹ ॥ ೧ ॥

ಅರಿಯೆವೇ ಈ ಪೀಟರನ ತಾ
ವರಿಯದವನೇ ಕೌಡ್ರಿ ಸ್ಪೀಡೇ
ಕೊರತೆಯಾಗಿಹ ಟ್ರೂಮನೆಂಬವ ನೆಮ್ಮೆದಿರಿಗಾಳಿ
ಕೆರಳಿ ಮೆಕ್ಕಿಫ ಬೆನಡರಿವರನು
ತರೆ ಬಡಿಯರೇ ತರಳರಿವರನು
ಮುರಿದು ರಬ್ಬರ ತರುವೆವೆಂದಿಂಡಿಯರು ಘರ್ಜಿಸಿತು ॥ ೨ ॥

ನಿಂದು ಕೇಂಬ್ರಿಡ್ಜಿನಲ್ಲಿ ಬಾಲಕ
ವೃಂದವನು ಕ್ರಿಕ್ಕೆಟಲಿ ಗೆಲಿದರು
ಮುಂದೆ ಗ್ಲಾಮರ್ಗನ್ನಿನಲ್ಲಿ ಪರಿಭವವನನುಭವಿಸಿ
ನೊಂದು ಸರ್ರೆಯ ಮ್ಯಾಚಿನಲಿ ಬಳಿ
ಕಂದು ಮೊದಲನೆ ಟೆಸ್ಟಿನಲಿ ತಾವ್
ತಿಂದರೋ ಪರಿಭವವ ಅಪಮಾನವನು ಎಲೆಕೊಟ್ರ ॥ ೩ ॥

ಬಳಿಕ ಲಾರ್ಡ್ಸಿನ ಟೆಸ್ಟಿನಲಿ ತಾ
ವಳುಕಿ ಜಯವನು ಬ್ರಿಟನಿಗೊಪ್ಪಿಸಿ
ಕಳದೊಳಹಿತರ ಕಂಡು ಬೆದರಿದರಿಂಡ್ಯಕ್ರಿಕ್ಕೆಟರು
ನೆಲದಳತೆಯಲಿ ಕಂಡು ನಕ್ಕರು
ಹುಳುಕರಿವದಿರು ಜಯವ ಗಳಿಪರೆ
ಬಳಿಸರೇತಕೆ ವಿನು ಅಬಾಸರನೆಂದು ಕಿರುಚಿದರು. ॥ ೪ ॥

ಎಂಟು ವಿಕೆಟಿಗೆ ಐದು ನೂರನು
ಟೆಂಟಣಿಸಿ ಬಿಗಿದವರು ಹಿಂಗಲು
ವೆಂಟಣಿಸಿತೋ ಮತ್ತೆ ನಮ್ಮಯ ಮುಂದೆ ಕಾಳಗಕೆ
ಭಂಟರೇ ಬೌಂಡರಿಯರ ಬಿಗಿವರೆ
ಕುಂಟರಿವದಿರು ರನ್ನ ಗಳಿಪರೆ
ಗಂಟಲಿಗೆ ಗಾಳವನು ಹಾಕರೆ ಫ್ರೆಡ್ಡಿಕ್ಲೋಸುಗಳು ॥ ೫ ॥

ಕೊಟ್ರ :—

ಅರಿಗುಸುರುವೆ ನಾರಿಗರುಹುವೆ
ನಾರಸಾರುವೆನಾರಿಗೊರಲುವೆ
ನಾರನೊದೆಯುವೆನಕಟ ಇವದಿರ ಜನ್ಮವನು ಸುಡಲಿ
ಪೂರ ಹೇಡಿಗಳಿವರ ಪೊಲುವು
ನ್ನಾರು ಜನಿಸಿದರು_ಟು ಪುರಣವೆ
ಭಾರಿ ಸಂತಸಯಿಂಥ ಅಪಕೀರ್ತಿಯನು ಹೊದ್ದುವರೆ || ೯ ||
ಅಂದು ಇಂಗ್ಲೆಂಡವರು ಆಟಕೆ
ಬಂದು ಚರಟವ ಹರಿದು ಕೊಟ್ಟರು.
ಕೊಂದು ಹಾಕಿದರೆಮ್ಮ ಹುಡುಗರ ಹಾಲಗಿಲ್ ಕ್ರಿಷ್ಟ
ಇಂದು ಸ್ವಾಥಮಟ್ರೊಮನಾದಿಗ
ಳಂದ ಗೆಡಿಸುತಲಿಹರು ಬಲ್ಲಿದ
ರೆಂದು ಕಳುಹಲು ಮುಖಕೆ ಮಸಿಯನು ಬಳಿದರೀ ಜನರು||೧೦||
ಆಳೊಳೊಡ್ಡುಳ್ಳವರು ಭಾರಿಯ
ತೋಳುಗಳ ಹೊತ್ತವರು ಉಳಿದೆಡೆ
ಕೋಳಿಗಳ ಬೌಲಿಂಗಿನಲಿ ಸೆಂಚುರಿ ಮೇಲೆ ಸೆಂಚುರಿಯ
ಹೋಳಿಗೆಯ ಮೆದೆಯಂತೆ ಪೇರಿಸಿ
ಕಾಲ ಪೊದಗಲು ಮುಂದೆ ಟೆಸ್ಟಲಿ
ಕಾಳುಗೆಡೆಯುತ ಸತ್ತು ಸಾಯದೆ ಇರುವರೆಂತೆಂದ || ೧೨ ||
ಕಾಲವಾಹನದಂತೆ ಮೆರೆವೆ
ಚ್ಛಾಳು ತನದವರೆಲ್ಲ ಟೆಸ್ಟಲಿ
ಸೋಲ ತಿಂದಿರಿ ಪಾಪಿಗಳಿರಪಕೀರ್ತಿಗಳುಕಿರಲಾ
ತೋಳಹೊರೆ ನಿಮಗೇಕೆ ಯಕಟವಿ
ಶಾಲ ಪೃಥ್ವಿಯೊಳುದಿಸಲೇತಕೆ
ಕೂಳುಗೇಡಿಂಗೊಡಲ ಹೊರುವಿರಿ ಎಂದನಾಕೊಟ್ರ || ೧೪ ||

ರಾಯ :—

ಕೇಳು ಕೊಟ್ರನೆ ಪೂರ್ವ ಸುಕೃತದ
ಶಾಲಿವನ ಪೊಣಗಿದೊಡೆ ಭಾರಿಯ
ತೋಳ ಹೊತ್ತೀಯಧಟರೆಮ್ಮನು ವಂಚಿಸಿದ ಬಳಿಕ
ಭಾಳಲಿಪಿಯಲಿ ಗೆಲವನಾಪ್ರತಿ
ಕೂಲವಿಧಿ ತಾ ಬರೆಯದಿದ್ದರೆ
ಹೇಳಿ ಫಲವೇನ್ ? ಏಕೆ ಕ್ರಿಕ್ಕೆಟ ತಂಟೆ ನಮಗಿನ್ನು || ೧೫ ||

ಕಪಿಕುಲ—ಲಾಮ

ಗಾಂಪರ ಗುಂಪು

" ಳಳ ಷೌಂಡು "

ಅವತ್ತು ಮಠದಲ್ಲಿ ಕೋಲಾಹಲ ಹೇಳತೀರದು. ಗುರುಗಾಂಪರೊಡೆಯರು ವಿಶೇಷ ಪೂಜೆ ಇಟ್ಟುಕೊಂಡಿದ್ದರು. ಗಾಂಪಕುಲೋದ್ಧಾರಕ–ಶ್ರೀ ಗಾಂಪದೇವಿಯ ಸಹಸ್ರಾರ್ಚನೆ–ನೇವಿದ್ಯ–ಬೀಳ್ಕೊಡುವ ಸಮಾರಂಭದ ಅಂಗವಾಗಿ ಮರುಳನ ತಂದೆ ಯವರಾದ ಶ್ರೀ ಮುರುಗಪ್ಪನವರ ಸೇವಾರ್ಥದಲ್ಲಿ ನಡೆಯುವುದಿತ್ತು. ಮಠದ ಬಾಗಿಲಿಗೆ ಬೇವಿನೆಲೆ ತೋರಣ ಕಟ್ಟಿ ಪಕ್ಕದಲ್ಲೇ ಒಂದು ಅಚ್ಚು ಬೆಲ್ಲ ನೇತುಹಾಕಿದ್ದರು. ಮಠದ ಮುಂದೆ ನಾಗಸ್ವರವಾದನವೋ ಎಂಬಂತೆ ಹಾವಾಡಿಗನೊಬ್ಬ ಪುಂಗಿ ಬಾರಿಸುತ್ತಿದ್ದ. ಎಲ್ಲ ಶಿಷ್ಯರೂ ಅಡಿಗೆಮನೆಯಲ್ಲಿದ್ದರು. ಮುಂದಿನ ಜಗುಲಿಯ ಮೇಲೆ ಶ್ರೀ ಶ್ರೀ ಶ್ರೀ ಗಾಂಪರೊಡೆಯ ಗುರುವರ್ಯರು ಆರಾಮಾಸನದಲ್ಲಿ ಮಂಡಿಸಿದ್ದರು. ವಿಪರೀತ ಜನ ಸೇರುವ ಸಂಭವವಿತ್ತು, ಜನಾರ್ಧನಯ್ಯ ಬಂದ. ಜನಾರ್ಧನ ನಮ್ಮೂರ ಹೋಟಲುಗಳಲ್ಲೆಲ್ಲಾ ಭರ್ಜರಿ ರುಚಿಯ ಮಸಾಲೆದೋಸೆ ಮಾಡಿ ಮರಿಮಗನನ್ನು ಇಂಗ್ಲೆಂಡಿನಲ್ಲಿ ಓದಿಸುತ್ತಾ ಇದ್ದಾನೆ.

"ನಮಸ್ಕಾರ—ಗಾಂಪರೊಡೆಯರಿಗೆ—"—ಎಂದು ಕೈ ಮುಗಿದು ನಿಂತ. ಗಾಂಪರಿಗೆ ಆಶ್ಚರ್ಯ—ಇಂಥಾ ರುಚಿಯಾದ ಮಸಾಲೆದೋಸೆಯ ಮನುಷ್ಯ ತಮ್ಮ ಮಠಕ್ಕೆ ಬಂದದ್ದು ಆಶ್ಚರ್ಯವೇ. ಗಾಂಪರೊಡೆಯರಿಗೆ ತಮ್ಮ ಪೂರ್ವಾಶ್ರಮದಲ್ಲಿ ಹೋಟಲನ್ನು ನಡೆಸಿ—ಎಲ್ಲವನ್ನೂ ಈ ಮಡೆಯ ಮುಠ್ಠಾಳರಂತಹ ಕೆಲಸಗಾರರ ಜೊತೆಗೆ ತಾವೂ ಸೇರಿ ತಿಂದು ಹೋಟಲನ್ನು ಮಠವಾಗಿ ಪರಿವರ್ತಿಸಿದ ದಿನಗಳು ನೆನಪಿಗೆ ಬಂದವು. ಹಳೆಯ ಗಾಂಪ ಮಠದ ಉತ್ಕಟ ಆರ್ಥಿಕ ಸಂಕಟ ಸಮಯದಲ್ಲಿ ಹಿರಿಯ ಗಾಂಪರೊಡೆಯರು ಓಡಿಹೋಗಿದ್ದರು (ಕೆಲವರು, ಮಿಡ್‌ವೈಫ್ ಪಂಕಜಾಕ್ಷಿಯೇ ಆ ಹಿರಿಯರನ್ನು ಓಡಿಸಿಕೊಂಡು ಹೋದಳೆಂದು ಹೇಳುವರು—ಇರಲಿ ಅದರ ಬಗ್ಗೆ ಸಂಶೋಧನೆ ನಡೆಯುತ್ತಿದೆ—ಮುಂದೊಮ್ಮೆ ಹೇಳೋಣ) ಈಗಿನ ಗುರುಗಳು ಗದ್ದುಗೆಯನ್ನೇರಿ ಮಠದ ಆರ್ಥಿಕಾಭಿವೃದ್ಧಿಗೆ ಚಂದಾ ಎತ್ತಿ ಹೋಟಲಿಟ್ಟು ಎಲ್ಲಾ ತಿಂದು ಮತ್ತೆ ಕಾವಿ ಹಾಕಿ ಕೂತಿದ್ದರು. ಅಂಥಾದ್ದರಲ್ಲಿ ಹೋಟಲಲ್ಲಿ ಉದ್ಧಾರವಾದ ಈ ಜನಾರ್ಧನ ಯಾಕೆ ಬಂದಾ ಎಂದು ಆಶ್ಚರ್ಯ ಆಗದೇ ಇರುತ್ತದೆಯೇ? "ನಮಸ್ಕಾರ....ಏನು ಬಂದದ್ದು?....?...."

ಎಂದು ಚೀಲದಲ್ಲಿದ್ದ ದೊಡ್ಡ ಪೊಟ್ಟಣ ಹೊರಗೆ ತೆಗೆದರು. ಲಂಡನ್ನಿಗೆ ಹೊರಡುವ ಮುನ್ನ ಜನಾರ್ಧನ ತಮಗೆ ಮೇಜುವಾನಿ ಮಾಡಲು ಮಸಾಲೆ ತಂದಿದ್ದಾನೆಂದೇ ಮಾರು ಹೋದರು ಮಂಕರಗುರು. "ಇದೆಲ್ಲಾ ಯಾಕೆ ಜನ್ನೂ....ಸುಮ್ಮನೇ ತೊಂದರೇ...."ಎಂದರು.

"ತೊಂದರೆ ನನಗೇನು ಬಂತು—ನೀವೇ ತೊಂದರೆ ತೆಗೆದುಕೊಳ್ಳಬೇಕೆಂದು ಬೇಡಿಕೊಳ್ಳೋಕೆ ಬಂದಿದ್ದೇನೆ....ಇದ್ರಲ್ಲಿ ಹಪ್ಪಳ—ಉಪ್ಪಿನಕಾಯಿ—ಚಟ್ನಿಪುಡಿ—ಮೆಂತೆದಿಟ್ಟು—ಖಾರದ ಮೆಣಸಿನಕಾಯಿ—ಕೇವಲ ನಾಲ್ಕೇ ನಾಲ್ಕು ಪುಳ್ಳಂಗಾಯಿ ಉಂಡೆ...."

"ನಿಜ ಅಷ್ಟೂ ತಿಂದರೆ ನಾನು ತೊಂದರೆ ತೊಗೊಂಡಹಾಗೆ ಸರಿ....ನಾನು ತಿನ್ನಲಾರೆ ಜನ್ನೂ....ಆದರೂ ನಮ್ಮ ಶಿಷ್ಯವರ್ಗ—ಮಂಕ ಮಡೆಯ ಮುತ್ಯಾಳ—ಮಡ್ಡಿ ಮರುಳರು ಮನಸ್ಸು ಮಾಡಿದರೆ—ಇದನ್ನ ಹಾಕಿರೋ ಸೀಶೆಯನ್ನೂ ತಿಂದು ಮುಗಿಸುತ್ತಾರೆ....ನಿನ್ನ ಪ್ರೀತಿಗೆ ನನ್ನ ಮಂತ್ರಾಕ್ಷತೆ ಸಾಧ್ಯವಿಲ್ಲ...."

"ಗಾಂಪರೊಡೆಯರೇ ಹಾಗಲ್ಲ ನಾನು ಹೇಳಿದ್ದು....ನನ್ನ ಮಗ ಲಂಡನ್ನಿನ ಹೈಡ್ ಪಾರ್ಕಿನ ಬಲಗಡೆ ಸಂದೀಲಿ ಮೂರನೇ ಮನೆಯ ಆರನೇ ಅಂತಸ್ತಿನಲ್ಲಿ ಇದ್ದಾನೆ—ಹುಡುಗ ಬಹಳ ವದ್ಯಾಡಿ ಕಾಗದಾ ಬರೆದಾನೆ—ಅಲ್ಲಿ ಬರೇ ಬ್ರೆಡ್ಡು ಬೆಣ್ಣೆಲೇ ಇದ್ದಾನಂತೆ—ದಯವಿಟ್ಟು ಇದನ್ನು ತಲುಪಿಸಿದರೆ—ನೀವು ಊರಿಗೆ ಬಂದಮೇಲೆ ನಿಮಗಾಗಿ ಸ್ಪೆಷಲ್ ಬೆಣ್ಣೆ ಮಸಾಲೆ ಕಳಿಸುವೆ"—ಎಂದು ಅಂಗಲಾಚಿದ ಜನಾರ್ದನಯ್ಯ. "ತಥಾಸ್ತು" ಅಂದರು ಪರೋಪಕಾರಂ ಇದಂ ಶರೀರಂ ಎಂಬ ಮಂತ್ರ ಜಪಿಸುತ್ತ. ಮರುಳನಿಗೆ ಇದನ್ನು ಟ್ರಂಕಿನಲ್ಲಿ ಹಾಕಲು ಹೇಳಿದರು. ಜನಾರ್ಧನ ಅಡ್ಡ ಬಿದ್ದು ಹೋದ.

"ಗುರುಗಳೇ....ನಾವು ಏರೋಪ್ಲೇನಿನಲ್ಲೇ ಹೋಗುವುದೆಂದು ತೀರ್ಮಾನ ಆಗಿದೆಯಲ್ಲವೆ?" ಎಂದ ಮರುಳ.

"ಹೌದು....ಮರುಳಾ....ನೀವು ಕುದುರೆಮೇಲೆ ಬೊಂಬಾಯಿತನಕ ಬರೋದಕ್ಕೆ ಆಗಲಾರದೆ ಕುದುರೇನೇ ಕೊಂದಿರಿ—ಇನ್ನು ವ್ಯವಸ್ಥೆ ಮಾಡದಿದ್ದರೆ ಆಗುತ್ತದೆಯೆ?...."

"ನಮಗೆ ಒಬ್ಬೊಬ್ಬರಿಗೆ ಳಳ ಪೌಂಡು ಮಾತ್ರ ಕೊಂಡೊಯ್ಯಲು ಅವಕಾಶ ವಿರೋದೂ....ಮತ್ತೆ ಈ ಹಪ್ಪಳ ಸೊಂಡಿಗೆ ಅಂದರೆ ಜಾಗವೆಲ್ಲಿ?....ಗುರುಗಳೆ...."

"ಏನೇನಾಗಿದೆ ಈಗ ನಮ್ಮ ಸಾಮಾನುಗಳು?"

"ಮಠದ ಮಾಮೂಲಿಯ ಮರ್ಯಾದೆ—ಕೊಂಬುಕಹಳೆ—ಪಲ್ಲಕ್ಕಿ—ನಿಮ್ಮ ಖಾಕಿ ಕಾವಿ ಸೂಟು—ಕೃಷ್ಣಾಂಜಿನದ ಬೂಡ್ಸಿನ ನಾಲ್ಕು ಜೊತೇ....ಹನ್ನೆರಡು ಜಪಮಾಲೆ—ನಾಲ್ಕು ಜೊತೆ ಕಮಂಡಲ—ಮೂರೇ ಮೂರು ಕೃಷ್ಣಾಂಜನ—ನಾಲ್ಕೂವರೆ ಪೌಂಡು ವಿಭೂತಿ—ಒಂದೇ ಪೌಂಡು ಕುಂಕುಮ—ಮತ್ತೆ...."

ಮತ್ತಿನ್ನೇನು—ನಿಮ್ಮಗಳ ಕಾವಿ—ಕಮಂಡಲ—ಕುದುರೆ—ಜೀನು ಅದರ ಹುರುಳಿ—ಮಾಲೀಷು ಬ್ರಿಷು....ಅಷ್ಟೇ ತಾನೇ...."

"ಇಲ್ಲ ಗುರುಗಳೇ—ಕುದುರೆಯನ್ನು ಏರೋಪ್ಲೇನಲ್ಲಿ ಕೊಂಡೊಯ್ಯುವುದಿಲ್ಲವಂತೆ—ಅದಕ್ಕೆ ಬರೇ ಜೀನು ಮಾತ್ರ ಪ್ಯಾಕ್ ಮಾಡಿದ್ದೀನಿ"

"ಕುದುರೆಯೇ ಇಲ್ಲದೆ ಜೀನು ಕೊಂಡವರುಂಟೆ ಮರುಳಯ್ಯ"

"ಅದಕ್ಕೊಂದು ಉಪಾಯವಿದೆ ಗುರುಗಳೇ—ನಿಮ್ಮ ಮಠ—ತಾವು ಮಠಾಧಿಪತಿಗಳು ಲಂಡನ್ನ ಏರೋಡ್ರೋಮಿನಿಂದ ಇಳಿಯುವ ಸ್ಥಳದ ತನಕ ನಡೆದು ಬರುವುದೆ?....ಅದಕ್ಕೇ ಜೀನು ಮಾತ್ರ ಕೊಂಡುಹೋದರೆ ಸಾಕು....ಏಕೆಂದರೆ ನಮ್ಮ ಮಡ್ಡಿಯ ಮುಖ ನೋಡಿಲ್ಲವೇ?"

"ನೋಡದೆ ಉಂಟೆ ಮರುಳಾ"

"ಅವನ ಊರು ಗೊತ್ತಿಲ್ಲವೆ ?"

"ಕುದುರೇ ಮುಖ"

"ಸರಿಯಾಯ್ತಲ್ಲ ಗುರುಗಳೇ ಕುದುರೇ ಮುಖದ ಈ ಮಡ್ಡಿಗೇ ಜೀನು ಹಾಕಿ ತಾವು ಮೆರವಣಿಗೆ ಹೊರಟರೆ B. B. C. ಅವರು ಇಂಥಾ ಅಪೂರ್ವ ದೃಶ್ಯ ಟೆಲಿವಿಷನ್ನಿನಲ್ಲಿ ತೋರಿಸದೆ ಇರುವರೇ ?....ಎಂಥಾ ಪಬ್ಲಿಸಿಟಿ ಗುರುಗಳೇ.... ಮಡ್ಡಿಯ ಮುಖವೂ ಹಾಗೇ ಇದೆ."

"ಸರಿಯಾಗಿದೆ ಯೋಚನೆ—ಆದರೆ ಮಡ್ಡಿ ಇದಕ್ಕೊಪ್ಪುತ್ತಾನೊ ?"

"ಹೀಗೆ ಮಾಡೋದೇ ನಿನ್ನ ಗುರುದಕ್ಷಿಣೆ ಎಂದರೆ—ಹೆಬ್ಬೆರಳು ಕಡಿದು ಕೊಟ್ಟ ಏಕಲವ್ಯನ ನಾಡಿನಲ್ಲಿ ಹುಟ್ಟಿದ ಇವನು ಮಾಡದೇ ಉಂಟೆ ?...."

"ಆದರೇ ಮರುಳಾ—ಇಷ್ಟೊಂದು ಸಾಮಾನು ಏರೋಪ್ಲೇನಿನಲ್ಲಿ ಹಿಡಿಸುತ್ತದೆಯೆ?...."

"ಹಾಗಂದರೇ—ನಮ್ಮ ರೈಲುಗಳಲ್ಲಿ ನಾವು ಹೇಗೆ ಮನುಷ್ಯರು ಸಾಮಾನನ್ನು ನಿರ್ದಾಕ್ಷಿಣ್ಯವಾಗಿ ತುಂಬೋಲ್ಲವೆ?—ಇದರಲ್ಲಿ ತಾರತಮ್ಯ ನಾವು ತೋರಿಸಬಾರದು ಎಂದು ಭಾರತೀಯರು ರೈಲಿಗೆ ನುಗ್ಗುತ್ತಿಲ್ಲವೆ?—ಅದು ನೆಲ—ಇದು ಆಕಾಶ ಅಷ್ಟೆ ವ್ಯತ್ಯಾಸ...."

"ಮರುಳಾ—ಈ ನಡುವೆ ನಿನ್ನ ಮೆದುಳು ತುಂಬಾ ಚುರುಕಾಗುತ್ತಿದೆ ಅಷ್ಟು ಚಿಗುರಲು ಬಿಡಬೇಡ ಮಠಕ್ಕೆ ಅಪಮಾನ. ಅದು ಇರಲಿ ನಾನು 'ಸ್ವರ್ಗ ಪಯಣ' ಟ್ರ್ಯಾವಲಿಂಗ್ ಏಜೆಂಟರನ್ನು ಕಂಡು ವಿವರ ತಿಳಿದು ಬರುವೆ—ಅಲ್ಲಿನ ತನಕ ಮಡ್ಡಿಯನ್ನು ಕುದುರೇ|ಲಾಯದಲ್ಲೇ ಕಟ್ಟಿಹಾಕಿರು ಅವನಿಗೂ ಅಭ್ಯಾಸವಾಗಲಿ...."

ಸರಿ ಗುರುಗಳೆ....ಹಾಗಾದರೇ ಈ ಜನಾರ್ಧನಯ್ಯನ—ಚಟ್ಣಿಪುಡಿ !"

"ನಿಮಗೆಲ್ಲ ಮಸಾಲೆ ದೋಸೆ ಬೇಡವೆ?...."

"ಸರಿ ಅದಕ್ಕೂ ಜಾಗ ಮಾಡ್ತೀನೆ."

ಮರುಳಾ—ನಾವುಗಳೂ ಉಪ್ಪಿನಕಾಯಿ—ಹುರುಳಿ ಹಪ್ಪಳ....ತೆಗೆದು ಕೊಂಡು ಹೋಗಬೇಕು—ಅಲ್ಲಿ ಬರೀ—ಬಿಸ್ಕತ್ತು ಬ್ರೆಡ್ಡು—ಬ್ರ್ಯಾಂಡಿ—ಬೀರು—ಬೇಕನ್—ಬೋವರಿಲ್—ಇತ್ಯಾದಿ ಅಂತೆ ನಮಗೆ ಆಗದು ಅದು....ಹುರುಳೀ ಹಪ್ಪಳ ಇಲ್ಲದೆ ನಮಗೆ ಊಟವೇ ಇಳಿಯದು"

ಗುರುಗಳೇ—ಹುರುಳೀ ಹಪ್ಪಳ ಆಗಿಹೋಗಿದೆ—ಮಡ್ಡಿ ಹಸಿಯ ಹುರುಳೀ ಹಪ್ಪಳವನ್ನೇ ತಿಂದು ಮುಗಿಸಿದ್ದಾನೆ."

"ಮತ್ತಷ್ಟು ಮಾಡಿಸು....ಆದಷ್ಟು ಕಮಂಡಲ—ಕೃಷ್ಣಾಂಜಿನ ಕಡಿಮೆ ಮಾಡಿ—ತಿಂಡಿತೀರ್ಥ ತೆಗೆದುಕೊಂಡು ಹೋಗಬೇಕು ..." ಯಾರೋ ಬಾಗಿಲು ತಟ್ಟಿದರು."—ಯಾರು ನೋಡು ಮಠದ ಬಾಗಿಲು ತಟ್ಟುತ್ತಿರುವವರು?"

ಮರುಳ ಹೋಗಿ ನೋಡಿದಾಗ ಜನ ಮಠದ ಮುಂದೆ ಕ್ಯೂ ನಿಂತಿದ್ದರು. ಇಂಥಾ ಕ್ಯೂ ನೋಡಿದರೆ ಮರುಳನಿಗೆ ಆಗದು ನೂಕಿ ನುಗ್ಗಿ—ಕೆಲಸ ಮಾಡಿ ಕೊಂಡರೇ ಇವನಿಗೆ ಹಿತ. ಹಿಂದೆ ಸಿನಿಮಾಗಳ ಟಿಕೆಟ್ಟು ಕೊಳ್ಳುವಾಗ ಕ್ಯೂ ಇಲ್ಲದಿದ್ದಾಗ ಕಾಚ ಹಾಕಿ ಹೊಡೆದಾಡಿ ನುಗ್ಗಿ ಟಿಕೆಟ್ಟು ತರುತ್ತಿದ್ದಾಗಿನ ಸೊಗಸು ಮರುಳ ಬಲ್ಲ. ಆದ್ದರಿಂದ ಈ ಕ್ಯೂ ಕಂಡು ವ್ಯಥೆಪಟ್ಟ.

"ಏನಿದು ನಿಮ್ಮ ಕ್ಯೂ—ಯಾಕೆ ಬಂದದ್ದು—ಸೀಮೆಗೆ ತೆರಳುವ ಗುರುಗಳ ದರ್ಶನಕ್ಕಾಗಿ ಕಾಣಿಕೆಕೊಟ್ಟು ಕೈ ಮುಗಿಯಲಿಕ್ಕೆ?...."

—ಎಂದಾಗ—ಉದ್ದನೆಯ ನೆಶ್ಯಮೂಗಿ ಚಿಕ್ಕ ಕಿವಿಯಲ್ಲಿ ಹತ್ತಿ ತುಂಬಿ ಕೊಂಡ—ದೊಡ್ಡ ಬಾಯಲ್ಲಿ ತಂಬಾಕು ಎಲೆ ಅಡಿಕೆ ಸೀಳು ಕಣ್ಣಿನ ಕನ್ನಡಕ ದೊಡನೆ ಬಗಲಲ್ಲಿದ್ದ ಚಿತ್ರ—ಒಂದು ಪಾರ್ಸಲು ತೋರಿಸಿ—ಮಾತಾಡಲು ಬಾಯಿ ಬಿಟ್ಟರೆ ತಂಬಾಕಿನ ರಸ ತುಳುಕಿ ಬೀಳುತ್ತಿದ್ದುದರಿಂದ ಬರೀ ಆ ಪಾರ್ಸಲ್ಲು ಚಿತ್ರ ತೋರಿಸಿ—ಒಳಗೇ ಬಂದು ಬಿಟ್ಟ. ಒಬ್ಬರ ಹಿಂದೊಬ್ಬರು ಬಂದು ಮಠದ ಉಪನ್ಯಾಸ ಶಾಲೆಯಲ್ಲಿ ಮಂಡಿಸಿದ್ದ ಗುರುಗಳಿಗೆ ಕೈ ಮುಗಿದು ನಿಂತರು. ಕ್ಯೂನಲ್ಲಿನ ಮೊದಲಿನವ ಮಾತಾಡುವ ಸ್ಥಿತಿಯಲ್ಲಿಲ್ಲದ್ದರಿಂದ ಎರಡನೇಯವನೇ ಹೇಳಿದ.

"ಗುರುಗಳೇ ನನ್ನ ತಮ್ಮನ ಭಾವಮೈದ ಲಂಡನ್ನಿನಲ್ಲಿದ್ದಾನೆ; ಅವನಿಗೆ ಈ ಚಕ್ಕುಲಿ—ಹುರಿಗಾಳು—ನಿಪ್ಪಟ್ಟು ತಲುಪಿಸಬೇಕು."

"ಲಂಡನ್ನಿನಲ್ಲಿ ಎಲ್ಲಿದ್ದಾನೆ?....ಇಲ್ಲಿಂದ ಯಾಕೆ ಅಲ್ಲಿ ಹೋದ?" "ಇಲ್ಲಿ ಮೊದಲು ಸರ್ ಶಿವಸಾಮಿ ಅವರ ಹತ್ತಿರ ಇದ್ದ—ಆಮೇಲೆ ರಾವ್‌ಬಹದ್ದೂರು ವೆಂಕಟಪತಿ ಅವರಲ್ಲಿ ಕೊಂಚ ದಿನ ಇದ್ದ—ಹುಡುಗ ಬಹಳ ಸೂಟಿ—"

"ಇಂಥವರಿಗೆಲ್ಲಾ ಸೆಕ್ರೆಟರಿ ಆಗಿದ್ದನೆ ಆತಾ?!"

"ಇದ್ದ—ಕೆಲವು ದಿನ ಜಮೀನ್‌ದಾರ್—ಶ್ರೀಮಂತ ಕಪಿನೀಪತಿ ಕಾಮತ್ತರಲ್ಲಿದ್ದ—ಕಡೆಗೆ ಉಡುಪಿ ಆನಂದ ಭವನದಲ್ಲೂ ಇದ್ದ—ಇತ್ತೀಚೆಗೆ ಬೊಂಬಾಯಿ ಕೃಷ್ಣ ಭವನಕ್ಕೆ ಸೇರಿದ್ದ—ಅಪುರೂಪದ ಚಾನ್ಸು—ಲಂಡನ್‌ನಲ್ಲಿ ಮಸಾಲೆ ಪುಡಿ—ಸಾರಿನ ಪುಡಿ—ಉಪ್ಪಿನಕಾಯಿ ಕಾರ್ಖಾನೇಲಿ ಇದ್ದಾನೆ....ಅದರೆ ಅವನಿಗೆ ಮನೆ ನಿಪ್ಪಂಟ್ಟಂದ್ರೆ ಪ್ರಾಣ—ದಯವಿಟ್ಟು ಕಳಿಸಿ...."....ಎಂದ.

"ಮರುಳಾ" ಎಂದರು—ಮರುಳ ಡಬ್ಬ ಒಳಗಿಟ್ಟುಕೊಂಡ.


ಹೀಗೇ—ಬಂದ ಒಬ್ಬೊಬ್ಬರೂ ಸಾಮಾನು ತುಂಬಿಸಿ ಹೋದರು. ಕೆಲವರು ಅಲ್ಲಿಂದ ಕ್ಯಾಮರಾ—ವಾಚು—ಪೆನ್ನು ಹ್ಯಾಟು ಇತ್ಯಾದಿಗಳನ್ನು ತರಲು ಹೇಳಿದರು. ಗಾಂಪರೊಡೆಯರು ಎಲ್ಲರಿಗೂ ಹೂಂ ಎಂದು ತಲೆ ಆಡಿಸಿ ಬಂದದ್ದೆಲ್ಲಾ ಉಗ್ರಾಣಕ್ಕೆ ಸೇರಿಸಿದರು.

ಮಡ್ಡಿ—ಮಂಕ—ಮಡೆಯ—ಮುಠ್ಠಾಳ—ರು ಆ ಗ ತಾ ನೇ ಬಂದ ಜಮಖಾನೆ ಸೂಟು ಧರಿಸಿ ಗುರುಗಳಿಗೆ ತೋರಿಸಿದರು. ಅವರ ಆಶೀರ್ವಾದ ಪಡೆದರು. ಎಲ್ಲಾ ತಯಾರಾಗಿ ಮುಂದಿನ ಬುಧವಾರ ಹೊರಡಲೇಬೇಕೆಂದು ಇವರಿಗೆ ಟಿಕೆಟ್ಟುಗಳ ವ್ಯವಸ್ಥೆ ಮಾಡಿದ "ಸ್ವರ್ಗ ಪಯಣ" ಟ್ರಾವಲಿಂಗ್ ಏಜನ್ಸಿ

ಯವರನ್ನು ನೋಡಲು ಸ್ವಯಂ ಗುರುಗಳೇ ಮಡ್ಡಿಯನ್ನೇರಿ ಹೊರಟರು.... ಕ್ಷಮಿಸಬೇಕು. ಕುದುರೆಯನ್ನೇರಿ ಹೋದರು. ಮರುಳ—ಮಂಕ—ಮಡೆಯರು ಸೊಗಸಾದ ತಟ್ಟೆಯಲ್ಲಿ ಆರ್ರ್ರೂಕಾಲು ಸೇರು ಅವಲಕ್ಕಿ ಹಾಕಿ ಜನಾರ್ಧನಯ್ಯ ಇತ್ಯಾದಿಗಳು ಕೊಟ್ಟ ಚಟ್ನಿ ಪುಡಿ ಮೆಂತ್ಯದ ಹಿಟ್ಟು ಧಾರಾಳವಾಗಿ ಸುರಿದು ಕಲೆಸಿ ಸುತ್ತಲೂ ಕೂತರು ಫಳಾರಕ್ಕೆ. ಮಠದಲ್ಲಿ ಗುರುವಾರ ಮಾತ್ರ ಊಟವಿಲ್ಲ ಬರೀ ತಿಂಡಿ.

—ಅವಲಕ್ಕಿ ಆಗಿದು ಆದರ ರುಚಿ ಅನುಭವಿಸಿದಾಗ ಲಂಡನ್ನಿನಲ್ಲಿದ್ದ ಸುಖವನ್ನು ಅನುಭವಿಸಿದರು.

೧೭–೬–೫೯
ಚೆಲ್ಟನ್‌ಹ್ಯಾಂ ಇಂಗ್ಲೆಂಡ್ } —ದಾಶರಥಿದೀಕ್ಷಿತ್



"ಮುಂದೆ ಚೆನ್ನಾಗಿ ಆಟ ಕಲಿತು ಟೆಸ್ಟ್ ಪ್ಲೇಯರ್ ಆಗೋಣಾಂತಿದ್ದೆ....ಈಗ ನೋಡು, ಹಾಕಿ ಆಟ ಕಲಿತರೇ ವಾಸೀ ಅನ್ಸುತ್ತೆ. ನಮಗೆ ಟೆಸ್ಟ್ ಅಂತಸ್ತೇ ಕೊಡೋಲ್ವಂತೆ."

ಅರ್ಪಣೆ

ಮುರಿದ ದೇಶವಿದೊಂದು ಹುರಿದ ಜನಗಣವೊಂದು
ಪರಮ ಕರುಣಾ ಮೂರ್ತಿ ನಿನಗೆ ಅರ್ಪಣೆಯು
ಇದುವೆ ನಾವ್ ಉಳಿಸಿರುವ ಸರ್ವ ಸಂಪದವೆಂದು
ಇದ ನೀಡುವೆವು ನಿನಗೆ ಕೊಂಡು ಸುಖಿಸಯ್ಯ

ರಾಮರಾಜ್ಯಕೆಂದು ಬರಿದೆ ನೀಯತ್ನಿಸಿದೆ
ಬೋಧಿಸಿದೆ ಶ್ರಮಿಸಿದೆ ಬರಿದೆ ಬಲು ಬಳಲ್ದೆ
ಸತ್ಯವೊ, ಅಹಿಂಸೆಯೋ, ಪ್ರೇಮವೋ, ಧರ್ಮವೋ
ಯಾವ ಮೂಲೆಗಳಲ್ಲಿ ಮಲಗಿ ನಿದ್ರಿಪವೋ !

ಆ ಹಿರಿಮೆ ಈ ಹಿರಿಮೆ ನಮ್ಮದೆಂದುಕೊಳುತ್ತ
ನಮಗೆ ಸಮನಾರೆಂದು ಭ್ರಮಿಸಿರುವೆವೊ
ಈ ಹಿರಿಮೆ ಹೆಮ್ಮೆಗಳ ಈ ಭ್ರಮೆಯ ಗುಟುರುಗಳ
ನೀಂ ದೂರದಿಂ ನೋಡಿ ನಗುತಲಿಹೆಯೋ

ಇಲ್ಲಿ ನಡೆಯುವುದಿಂದು ನಿನ್ನ ಗಮನಕೆ ಬರದು
ನೀನೆ ಇದ್ದರು ಇಂದು ನಿನ್ನ ಕೈಮೀರಿ ಇಹುದು
ನಡೆಯಬೇಕಾದ್ದೆಲ್ಲ ನಡೆದೆ ನಡೆಯುವುದು
ಕೆಡುಕಾಗದಿರಲೆಂದು ಬೇಡುವುದು ನಿನದು.

ಇಂತಾಗಬಹುದೆಂದು ತಿಳಿದಿದ್ದಿತೋ ನಿನಗೆ ?
ಈ ಪಥವ ನೀ ಕನಸು ಕಂಡಿದ್ದೆಯೋ ?
ಇದ ಕಂಡು ನೀನಿಂದು ಕೊರಗುತಿಹೆಯೋ ?
ಕೊಂಕು ವಿಧಿ ನಿನ್ನ ನೀಪರಿ ಅಣಕಿಸಿಹುದೋ ?

ನಿನ್ನ ನಾಡಿದು ಒಂದು ಸುಳಿಗೆ ಸಿಕ್ಕಂತಿಹುದು
ಮೇಲ್ಮೇಲೆ ನುಗ್ಗುವುವು ಶಂಕೆ ಭೀತಿಗಳು
ಒಳಗೊಳಗೆ ಕುದಿಯುವುದು ನಡುವೆ ಕಿಡಿ ಕಾರುವುದು
ಸ್ವಾತಂತ್ರ್ಯ ಬಂದರೂ ಸುಮ್ಮನಾಗದಿದು.

(ವಿ. ಸೀ. ಅವರಿಗೆ ನಮೋ ಎಂದು)

—ರಾಮಿ.

ಗುಟ್ಟು ಬಯಲಾಯಿತು!

ಮೊನ್ನೆ ಮೊನ್ನೆ ಒಬ್ಬ ವಿಜ್ಞಾನಿ ನಾವು ವಾಸಿಸುತ್ತಿರುವ ಈ ಭೂಗ್ರಹವ ಕುರಿತು ಬಹು ಸ್ವಾರಸ್ಯವಾದ ಒಂದು ವಿಷಯವನ್ನು ಹೊರಗೆಡಹಿದ. ಈ ಗ್ರಹದ ಚಲನೆಯ ವೇಗ ಬರಬರುತ್ತ ಮಂದವಾಗುತ್ತಿದೆಯೆಂದೂ, ಹೀಗೆ ನಿಧಾನವಾಗುತ್ತ ಬಂದು, ಇನ್ನು ಎಷ್ಟೋ ವರ್ಷಗಳಲ್ಲಿ ಈ ಚಲನೆ ಪೂರ್ತಿ ನಿಂತು ಹೋಗುವುದೆಂದೂ ಆತನಿಗೆ ಸಂಶೋಧನೆಯಿಂದ ತಿಳಿಯಿತಂತೆ. ಆತ ಕೊಟ್ಟ ವರ್ಷಗಳ ಸಂಖ್ಯೆಯೇನೋ ಮಾರುದ್ದವಿತ್ತೆನ್ನಿ. ಆ ವಿಚಾರ ಬೇರೆ. ಅದೇನಿದ್ದರೂ ಆತ ಕಂಡುಹಿಡಿದ ಈ ವೈಜ್ಞಾನಿಕ ಸತ್ಯದಿಂದ ನಮ್ಮಲ್ಲನೇಕರ ತಲೆ ತಿನ್ನುತ್ತಿದ್ದ ಒಂದು ಸಮಸ್ಯೆ ಬಗೆಹರಿದಂತಾಯಿತು. ಆದುದರಿಂದ ಆ ವಿಜ್ಞಾನಿಗೆ ಈಗಾಗಲೇ ಒಂದು ನೋಬೆಲ್ ಪಾರಿತೋಷಕ ದೊರತಿರದಿದ್ದರೆ ಇನ್ನಾದರೂ ಸಂಬಂಧಪಟ್ಟವರು ಕಣ್ಣು ತೆರೆಯಲಿ.

ಭೂಮಿಯ ಚಲನೆಯ ವೇಗ ಕಡಮೆಯಾಗುತ್ತಿದೆ ಎಂಬ ವಿಷಯ ತಿಳಿದುದರಿಂದ ಒಂದು ಒಗಟು ಬಗೆಹರಿಯಿತಲ್ಲ—ಆ ಒಗಟು ಯಾವುದು? ಪ್ರತಿಯೊಂದು ವಿಷಯದಲ್ಲಿಯೂ ವೇಗ ವರ್ಧಿಸುತ್ತಿರುವಂತೆ ಕಾಣುವ ಈ ಯುಗದಲ್ಲಿ ಭೂಮಿ ಮಾತ್ರ ತನ್ನ ವೇಗವನ್ನು ಕಡಮೆ ಮಾಡಿಕೊಳ್ಳುತ್ತಿರುವುದರಿಂದ ಯಾವ ಸಮಸ್ಯೆ ಬಗೆಹರಿದಂತಾಯಿತು? ಇದು ಅರ್ಥವಾಗಬೇಕಾದರೆ ನಾವು ನಮ್ಮ ದೈನಂದಿನ ಜೀವನಕ್ಕೆ ಸಂಬಂಧಿಸಿದ ಕೆಲವು ವಿಷಯಗಳನ್ನು ಗಮನಿಸಬೇಕಾಗುತ್ತದೆ.

ರೈಲುಗಳು ಘಂಟೆಗಟ್ಟಲೆ ತಡವಾಗಿ ತಲುಪುವುದನ್ನು ನೀವು ಗಮನಿಸಿದ್ದೀರಾ? ಕಾಗದಗಳು ದಿನಗಟ್ಟಲೆ ತಡವಾಗಿ ಬಂದವೆಂದು, ತಂತಿಗಳು ಕಾಗದಗಳಿಗಿಂತಲೂ ನಿಧಾನವಾಗಿ ಬಂದವೆಂದು ನೀವು ಗೊಣಗಿದ್ದಿಲ್ಲವೇ? ಅರ್ಜಿಗಳನ್ನು ಸಲ್ಲಿಸಿದರೆ ಉತ್ತರಗಳು ವರ್ಷಗಟ್ಟಲೆ ತಡವಾದವೆಂದು ನೀವು ರೇಗಿದ್ದಿಲ್ಲವೇ? ಪ್ರೀಮಿಯಂ ನೋಟೀಸು ಬಂದಿದ್ದು ತಡವಾಯಿತು, ನೀವು ಹಣ ಕಟ್ಟಿದ್ದೂ ತಡವಾಯಿತು, ರಶೀದಿಯೂ ತಡವಾಯಿತು, ಹೀಗೆ ಎಲ್ಲವೂ ತಡವಾಗಿ ನಡೆಯುತ್ತಿವೆ. ಕಾಗದಕ್ಕೆ ಪ್ರತ್ಯುತ್ತರ ಬರುವುದೂ ತಡ; ನಾವು ಪೋಸ್ಟ್ ಮಾಡಿದ್ದೂ ತಡವಾಗಿಯೇ, ಕೊಟ್ಟ ಸಾಲ ಹಿಂದೆ ಬರುವುದೂ ತಡವಾಗಿಯೇ, ಆಡಿದ್ದನ್ನು ನಡೆಸಿಕೊಡುವುದೂ ತಡವಾಗಿಯೇ, ಅರ್ಜಿ ಫಾರಂ ಬರುವುದೂ ತಡವಾಗಿ, ಅರ್ಜಿ ಗುಜರಾಯಿವುದೂ

ತಡವಾಗಿ, ಪರೀಕ್ಷೆಗಳೂ ತಡವಾಗಿ ಕೊನೆಗೆ ಫಲಿತಾಂಶಗಳೂ ತ....ಡ....ವಾ....ಗಿ ....ಯೇ. ಇದನ್ನೆಲ್ಲ ಪ್ರತಿಯೊಬ್ಬರೂ ಗಮನಿಸಿರಲೇಬೇಕು. ಇಲ್ಲವೆಂದರೆ ಆತ ಈ ಗ್ರಹಕ್ಕೆ ಸೇರಿದವನಲ್ಲ ಎಂದರ್ಥ. ಈ ಗ್ರಹದ ಈ ಮೂಲೆಗೆ ಸೇರಿದವರೆಲ್ಲರಿಗೂ ಮೇಲ್ಕಂಡ ಅನುಭವಗಳು ಉಂಟಾಗಿರಲೇಬೇಕು. ಆ ಕುರಿತು ಗೊಣಗಾಡಿದ್ದಿರ ಲೇಬೇಕು. ಬರಬರುತ್ತಾ ಏಕೆ ಹೀಗೆ ಎಲ್ಲವೂ ನಿಧಾನವಾಗುತ್ತ ನಡೆದಿದೆ ಎಂದು ಚಿಂತಿಸಿರಲೇಬೇಕು.

ಒಂದೆಡೆಯಲ್ಲಿ ವಿಜ್ಞಾನಿಗಳು ಕಂಡು ಹಿಡಿದ ವಿವಿಧ ಸಾಮಗ್ರಿಗಳಿಂದಾಗಿ ವೇಗ ದಿಕ್ಕು ಮುಖವಿಲ್ಲದೆ ವರ್ಧಿಸುತ್ತಾ ಇದೆ. ಉದಾಹರಣೆಗಾಗಿ ಹಾರೋ ಪ್ಲೇನುಗಳೂ, ರಾಕೆಟ್‌ಗಳೂ, ಉಪಗ್ರಹಗಳೂ ದಿನದಿನಕ್ಕೆ ತಮ್ಮ ವೇಗದ ದಾಖಲೆ ಗಳನ್ನು ಮುರಿದು ಮುಕ್ಕುತ್ತಿವೆ ! ನಾವು ನಡೆದು ಹೋಗಿ ಮಾರ್ಕೆಟ್ ತಲಪುವ ಹೊತ್ತಿಗೆ ಸೂಪರ್ ಜೆಟ್ಟಿಗರು ಸಾವಿರ ಮೈಲು ಆಚಿನ ಪರ್ವತದ ತನಕ ಹಾರಿ ಸಿಡಿದು ಚೂರು ಚೂರಾಗಿರುತ್ತಾರೆ. ಹೀಗೆ ವೇಗ ಹೆಚ್ಚುತ್ತಿದ್ದರೂ ಇತರ ಎಷ್ಟೋ ಚಿಕ್ಕ ಪುಟ್ಟ ವಿಷಯಗಳಲ್ಲಿ—ಈ ಯಂತ್ರಯುಗದಲ್ಲಿಯೂ ಇಷ್ಟೊಂದು ನಿಧಾನವೇಕೆ ?


ಏಕೆ ಈ ನಿಧಾನ ಎಂದು ಹೋಟಲ್ ಭಕ್ತರೊಬ್ಬರು ಮೊನ್ನೆ ತಲೆ ತುರಿಸಿ ಕೊಳ್ಳುತ್ತಿದ್ದರು. ಕುರ್ಚಿ ಹಿಡಿದು ಅರ್ಧ ಗಂಟೆಯ ಮೇಲೆ ಸರ್ವರಿನ ದರ್ಶನ, ಬೇಕೆನಿಸಿದ ತಿಂಡಿಯ ಹೆಸರು ಹೇಳಿ ಬಾಯಲ್ಲಿ ಅರ್ಧ ಘಂಟೆಕಾಲ ಜೊಲ್ಲು ಸುರಿಸಿದ ಮೇಲೆ ತಿಂಡಿಯ ದರ್ಶನ, ತಿಂಡಿಯಲ್ಲಡಗಿರಬಹುದಾದ ಮೆಣಸಿನ ಚೂರಿನಿಂದಾಗಿ ಅರ್ಧ ಗಂಟೆ ಕಣ್ಣೀರು ಸುರಿಸಿದ ಮೇಲೆ ಕಾಫಿಯ ದರ್ಶನ—ಇದೆಲ್ಲ ಜೀರ್ಣವಾಗಿ ಇನ್ನೊಮ್ಮೆ ಕುಡಿದರಾಗಬಹುದು ಎನ್ನುವಂತಾದಮೇಲೆ ಬಿಲ್ಲಿನ ದರ್ಶನ—ಎಂದು ಮುಂತಾಗಿ ಅವರ ಹೋಟಲ್ ಪುರಾಣ ಸಾಗಿತ್ತು. ಕೇಳುತ್ತ ಕುಳಿತವರೂ ಈ ವಿಳಂಬದ ಹಾವಳಿಯ ಕುರಿತು ತಮ್ಮ ತಮ್ಮ ಅನುಭವ ಗಳನ್ನು ಹೇಳಿದರು. 'ಈ 'go slow' ಎಂಬುದು ಸಾರ್ವಜನಿಕ ಜೀವನದ ಪ್ರತಿಯೊಂದು ಅಂಗದಲ್ಲಿಯೂ ಸೇರಿ ಹೋಗಿಬಿಟ್ಟಿದೆ' ಎಂದು ಅವರಲ್ಲೊಬ್ಬರು ಗೋಗರೆದಾಗ ಎಲ್ಲರೂ ತಲೆದೂಗಿದರು. ನಮ್ಮ ಯೋಗಕ್ಷೇಮದ ಜವಾಬ್ದಾರಿಯೆಲ್ಲ ತಮ್ಮದೇ ಎನ್ನುವ ಇನ್ಶೂರೆನ್ಸಿನವರಿಂದ ತೊಡಗಿ, ಅಂಚೆ, ತಂತಿ, ರೈಲು, ಆಸ್ಪತ್ರೆ, ಅವರು ಇವರು ಇನ್ನೊಬ್ಬರು—ಹೀಗೆ ಪ್ರತಿಯೊಬ್ಬರೂ ನಿಧಾನವಾಗುತ್ತಿದ್ದಾರೆ ಎಂಬುದು ಸಿದ್ಧಾಂತವಾಯಿತು. ಏಕೆ ಹೀಗೆ ಎಂದು ಹುಬ್ಬೇರಿಸಿ ಎಲ್ಲರೂ ಸಮಸ್ಯಾತ್ಮಕ ಮೂರ್ತಿಗಳನ್ನು ಹೊಂದಿರುವಾಗಲೇ ಆ ವಿಜ್ಞಾನಿಯು ಭೂಮಿಯ ಕುರಿತು ಹೊರಗೆಡಹಿದ ಮಾಹಿತಿ ಪ್ರಕಟವಾದದ್ದು. ಆಗಲೇ ಗುಟ್ಟು ಬಯಲಾಯಿತು. ಭೂಮಿಯ ಚಲನೆಯ ವೇಗವೇ ಕಡಿಮೆಯಾಗುತ್ತಿರುವಾಗ ಈ

ಗ್ರಹದ ಮಾನವ ಜೀವಿಗಳ ಕೆಲವು ಚಟುವಟಿಕೆಗಳಾದರೂ ನಿಧಾನವಾಗಿ ನಡೆಯುತ್ತಿರುವುದು ಪ್ರಕೃತಿ ದತ್ತ, ತೀರ ಸಹಜ, ಎಂಬ ಸಮಾಧಾನವೊಂದು ದೊರಕಿತು.

ಮಾನವ ನಿರ್ಮಿತ ವಸ್ತುಗಳು ವೇಗದಲ್ಲಿ ಒಂದನ್ನೊಂದು ಮೀರಿಸಿದರೆ ಮೀರಿಸಿಕೊಳ್ಳಲಿ.

ಆದರೆ ಮಣ್ಣಿನ ಮಕ್ಕಳಾದ ನಾವು ನಮ್ಮ ಕಾರ್ಯವೇಗವನ್ನು ಕಡಮೆ ಮಾಡಿಕೊಳ್ಳುವುದರಲ್ಲಿ ಅರ್ಥವಿಲ್ಲದೆ ಇಲ್ಲ. ನಮ್ಮ ಮಾತೃಗ್ರಹದ ವೇಗವೇ ಕಡಮೆಯಾಗುತ್ತಿರುವಾಗ ನಾವು ನಮ್ಮ ವೇಗವನ್ನು ಹೆಚ್ಚಿಸಿಕೊಳ್ಳುವುದೆಂದರೆ ನಿಸರ್ಗವನ್ನು ಮೀರಿದಂತೆಯೇ ಸರಿ. ಆದುದರಿಂದ ಏಕೆ ಹೀಗೆ ಎಲ್ಲವೂ ನಿಧಾನವಾಗುತ್ತಿದೆ ಎಂದು ಯಾರೂ ತಲೆ ತುರಿಸಿಕೊಳ್ಳಬೇಕಾಗಿಲ್ಲ. ಏಕೆಂದರೆ ಗುಟ್ಟು ಬಯಲಾಗಿದೆ. ಭೂಮಿಯ ಚಲನೆಯ ವೇಗ ಕಡಿಮೆಯಾಗಿ, ಆಗಿ, ಕೊನೆಗೊಮ್ಮೆ ಅದು ನಿಂತೇ ಹೋಗುವುದೆಂದು ಆತ ಹೇಳುತ್ತಾನಲ್ಲ—ಆ ಸಮಾಚಾರ ಹೇಗೆ? ಆ ವೇಗವು ಕಡಿಮೆಯಾಗುವ ಪ್ರಮಾಣಕ್ಕೂ ನಮ್ಮ go slow ನೀತಿಗೂ ಹೊಂದಾಣಿಕೆಯಿದ್ದರೆ ಚಿಂತಿಲ್ಲ, ಆದರೆ ಹಾಗಾಗದೆ ನಮ್ಮ go slow ದ ವೇಗ ಅತಿಯಾಗಿ ಭೂಮಿ ತನ್ನ ಚಲನೆಯನ್ನು ನಿಲ್ಲಿಸುವ ಮೊದಲೇ ನಾವು ನಮ್ಮ ಚಟುವಟಿಕೆಗಳನ್ನು ನಿಲ್ಲಿಸಿಬಿಟ್ಟರೆ ಗತಿಯೇನು? ಈ ಕುರಿತು ವಿಜ್ಞಾನಿಗಳು ಹೆಚ್ಚಿನ ಸಂಶೋಧನೆಯನ್ನು ನಡೆಸಿಯಾರೆಂದು ಆಶಿಸೋಣವೆ?

—ರಾಮಿ



ಚೆನ್ನಿ ತೌರಿಗೆ ಹೋಗಿದ್ದಾಳೇಂತ, ಚೆನ್ನಿ ಗಂಡ ಎಷ್ಟು ಹಿಗ್ಗುತ್ತಾ ಇದಾನೆ ನೋಡೇ!

ಅರಿತವರ ನೀತಿಯು ಕತೆಗಳು

ಯಥಾಪ್ರಕಾರ ಒಂದೂರಿತ್ತಂತೆ. ಅಲ್ಲೊಬ್ಬ ದರ್ಜಿ ಸೊಗಸಾದ ಟೋಪಿಗಳನ್ನು ಹೊಲಿದು, ಸಂತೆಗಳಿಗೆ ತೆಗೆದುಕೊಂಡು ಹೋಗಿ ೮–೧೦ ಜನಕ್ಕೆ ಮಾರಿ ಜೀವನ ಮಾಡುತ್ತಿದ್ದನಂತೆ. ಏನೋ ಯೋಚನೆ ಹೊಳೆದು (ತಲೆಗೆ ತಂಪು ಕೊಡುವ ನೋಡುಕ್ಕೆ ಸೊಂಪಾದ) ಎರಡೇ ಆಣೆಗೆ ಒಂದು ಟೋಪಿ ರಚಿಸಿ ಬುಟ್ಟಿ ಬುಟ್ಟಿ ಟೋಪಿ ಹೊಲಿದು ಸಂತೇಲೆಲ್ಲಾ ಕೊಂಡುಕೊಳ್ಳುತ್ತಾರೆ. ಅಂತ ಲೆಕ್ಕ ಹಾಕಿದನಂತೆ.

ಸಂತೆಹಳ್ಳಿಗೆ ಹೋಗೋ ದಾರಿಯಲ್ಲಿ ತೋಪೊಂದು ಸಿಕ್ಕಿತಂತೆ. ನದಿ ದಡವಂತೆ ತಾಯ್ಮಳಲು, ಹೊಂಗೆ ನೆರಳಿನಲ್ಲಿ ತಂಗಿ, ತಂದಿದ್ದ ತುಂಬೆ ಸೊಪ್ಪು ಅಂಬಲೀನ ತಿಂದು ಒಂದರಕ್ಷಣ ಮಲಗಿದನಂತೆ. ಝೊಂಪು ಜೋರಾಗಿ ಹತ್ತಿತಂತೆ ನಿದ್ರೆ ಬಂತಂತೆ.

ಎದ್ದಾಗ ಸಾಯಂಕಾಲವಾಗಿತ್ತಂತೆ. ನೋಡ್ತಾನೆ ಬುಟ್ಟಿಗಳೆಲ್ಲಾ ಖಾಲಿಯಂತೆ ತನ್ನ ತಲೆಮೇಲಿದ್ದ ಟೋಪಿಯೊಂದೇ ಮಾದರಿಗಾಗಿ ಉಳಿದಿತ್ತಂತೆ. ಯಾವ ಕಳ್ಳ ಬಂದು ಹೊಡೆದುಕೊಂಡು ಹೋದನಪ್ಪಾ ಅಂತ ಅಳುಕ್ಕೇ ಶುರುಮಾಡುವುದ ರಲ್ಲಿದ್ದನಂತೆ.

ಚಿಲಿಪಿಲಿ ಗುರ್ ಗುರು, ಕೇಳಿಸಿತಂತೆ. ತಲೆಯೆತ್ತಿ ನೋಡ್ತಾನೆ,! ಮಂಗ ಮಾಯವಾಗಿದ್ದ ಟೋಪಿಗಳೆಲ್ಲಾ ಮರದಮೇಲೆ ನೆರೆದಿದ್ದ ಮಂಗಗಳ ತಲೆಯಮೇಲೆ ಮೆರೆದಾಡುತ್ತಿದ್ದುವಂತೆ. ಗೀತೆ ಹಾಡಿದನಂತೆ, ಈಶ್ವರ ಅಲ್ಲಾ ತೇರೇ ನಾಂ ಕ್ಯಾ ? ಅಂದು ಕೇಳಿದನಂತೆ, ಕಲ್ಲೆಸೆದನಂತೆ. ಮರದ ಮೇಲಿದ್ದ ಹಸಿರು ಚೇಪೆ ಕಾಯಿ ಗಳನ್ನು ಮಂಗಗಳು ಬೀರಿದುವಂತೆ.

ಕಡೆಗೆ ಕತೇಲಿ ಹೇಳಿದ ಹಾಗೆ ತನ್ನ ತಲೆ ಮೇಲಿದ್ದ ಟೋಪೀನ ತೆಗೆದು ನೆಲಕ್ಕೆ ಅಪ್ಪಳಿಸಿ ಎಸೆದನಂತೆ.

ಅವನ ಹಿಂದೆಯೇ ಅವನಿಗೆ ಕಾಣಿಸದಂತೆ ಟೋಪಿ ಸಿಗದೆ ಇದ್ದ ಗಡವಾ ಕೋತಿಯೊಂದು ಇವನ ಟೋಪಿಗಾಗಿ ಕಾದಿತ್ತಂತೆ. ಅನಾಯಾಸವಾಗಿ ನೆಲಕ್ಕೆ ಬಿದ್ದ ಟೋಪಿಯನ್ನು 'ಛಂಗನೆ ಓಡಿ' ಬಂದು ಹಾರಿಸಿಕೊಂಡು, ತನ್ನ ತಲೆಗೆ ಹಾಕಿಕೊಂಡು, ಮರ ಹತ್ತಿ ಮರಾಮರಾ ರಾಜ್ಯವನ್ನು ಆಳಲು ಆರಂಭ ಮಾಡಿ ಬಿಟ್ಟಿತಂತೆ.

ದರ್ಜಿಗೆ ಇದನ್ನು ನೋಡಿ ಎದೆಯೊಡೆಯಿತಂತೆ. ಈ ಕರೀಮೂತಿ ಮಂಗಗಳ ಸಹವಾಸ ಸಾಕಿನ್ನು, ಪಾಂಡುರಂಗನ ಪಾದಾರವಿಂದವೇ ಚಿನ್ನ ಅಂತ ಆತ್ಮಸಾಕ್ಷಾತ್ಕಾ ರವನ್ನು ಪಡೆದನಂತೆ.

ಕತೆ ಕಾಡಿಗೋಯ್ತಂತೆ— ಟೋಪಿಯೋರು ಊರಲ್ಲಿ ಮೆರೆದರಂತೆ.

—ಗೋಪಾಲಿ

ಕಡೆಗೂ ಸರ್ವೋದಯ....

"ನಮಗೆ ಸ್ವಾತಂತ್ರ್ಯ ಲಭಿಸಿ ಹನ್ನೆರಡು ವರ್ಷಗಳಾದುವು. ಅದು ಬಂದರೂ ನಮಗೆ ಬಂದದ್ದೇನು? ನಮ್ಮ ಹಳೆಯ ಸಮಾಜ ಪದ್ಧತಿಯಾಗಲಿ, ಸಮತಾವಾದಿ ಸಮಾಜವಾಗಲೀ ನಮ್ಮ ಮುಂದಿನ ಅಂಧಕಾರವನ್ನು ತೊಲಗಿಸಲು ಶಕ್ತವಾಗಲಿಲ್ಲ. ನಮ್ಮ ಮಾರ್ಗ ಸುಗಮವಾಗಲು, ದೇಶ ಸುಖಭರಿತವಾಗಲು ನಮಗೊಂದು ಮಾರ್ಗ ಬೇಕಾಗಿತ್ತು. ವಿನೋಬಾ ಅದನ್ನು ಕಂಡರು. ಅವರು ನೀಡಿದ ಬೆಳಕು ನಮ್ಮೆಲ್ಲರ ಆಶಾಜ್ಯೋತಿಯಾಯ್ತು. ಇನ್ನು ನಮಗೆ ಭಯವಿಲ್ಲ. ಅವರು ನೆಟ್ಟ ಸಸಿಗೆ ನೀರೆರೆಯಲು ಶ್ರೀ ಜಯಪ್ರಕಾಶ್ ನಾರಾಯಣರು ತಮ್ಮ ಶ್ರೀಮತಿಯವರೊಡನೆ ಇಂದು ಮುಗಿಲು ಹಳ್ಳಿಗೆ ದಯಮಾಡಿಸಿ...."

ಇದೀಗ, ಕತ್ತಿ ಸಂಕಣ್ಣ ಬಿಗಿಯುತ್ತಿದ್ದ ಭಾಷಣ. ಅವನು "ಈ ಪಿಟರೀ.... ಗೆ ಹಾಕ್ಕಲೇ" "ಯಾಕೋ ಭೋಸು—ಕೆ" "ಆ ಮಂಗ್ಯಾನ....ಗೆ" ಇತ್ಯಾದಿಯಲ್ಲೇ ಜೀವಮಾನವನ್ನೆಲ್ಲಾ ಕಳೆದವನು. ಆದರೆ ಇಂದು ಸಹವಾಸ ಬಲದಿಂದ ಎಂಥ ಮಾತಾಡುತ್ತಿದಾನೆ. ಅವನ ಭಾಷಣ ಮುಗಿಯಲೇ ಇಲ್ಲ. ಭಂಗಿ ಬಸಣ್ಣ ಚಪ್ಪಾಳೆ ತಟ್ಟಿ ಎದ್ದು ನಿಂತ.

"ಮಾನ್ಯ ಜಯಪ್ರಕಾಶರೇ ನಾನೇನು ಹೇಳಲಿ? ಹೇಳಲು ಬಂದಿಲ್ಲ. ನಾವು ಕೇಳಲು ಬಂದಿದ್ದೇವೆ. ಟಿಬೆಟ್, ಕೇರಳ, ಸ್ವತಂತ್ರ ಪಾರ್ಟಿ ಇವುಗಳ ಬಗ್ಗೆ ನಿಮ್ಮ ಅಭಿಪ್ರಾಯ ಕೇಳಲು ಇಡೀ ಮುಗಿಲು ಹಳ್ಳಿಗೆ ಮುಗಿಳು ಹಳ್ಳಿಯೇ ನೆರೆದಿದೆ ಹೇಳಿ. ಹೇಳಿ ಸರ್ವೋದಯವಾಗಲಿ." ಎಂದ.

ಬಸಣ್ಣನ ಪಟ್ಟ ಶಿಷ್ಯ ಮಹಾರುದ್ರ "ಜೈ ನಿಮ್ಮ ವೋಟು ನಮಗೇ" ಎನ್ನುತ್ತಾ ವೇದಿಕೆಯನ್ನಿಳಿದು ಹೋದ. ಅವನ ಹಿಂದೆ ಮುಗಿಲು ಹಳ್ಳಿಯ ಪುರಸಭಾಸದಸ್ಯರು ಹೋದರು. ಅಂದು ಯಥಾಪ್ರಕಾರ ಅಧ್ಯಕ್ಷಗಿರಿಯ ಚುನಾವಣೆ ನಡೆಯಲಿತ್ತು.

ಜಯಪ್ರಕಾಶರ ಪಕ್ಕದಲ್ಲೇ ಕುಳಿತಿದ್ದರು; ಸ್ವಾಗತ ಸಮಿತಿ ಅಧ್ಯಕ್ಷರೂ, ಮಾಜಿ ಪುರಸಭಾಧ್ಯಕ್ಷರೂ ಆದ ಮುರಾರಿಯವರು. ಅಲ್ಪ ಸಂಖ್ಯಾತ

ಕೋಮೊಂದರಲ್ಲಿ ಜನಿಸಿದ ಅವರಿಗೆ ಪ್ರಥಮ ಚುಂಬನದಲ್ಲೇ ದಂತಭಗ್ನವಾದಂತೆ ಅಧ್ಯಕ್ಷಗಿರಿ ಬಂದ ಮೂರು ತಿಂಗಳಲ್ಲೇ ಜಾರಿ ಹೋಗಿತ್ತು.

ಮುರಾರಿಯವರು ಎದ್ದು ನಿಂತು ಹೇಳಿದರು.

"ಅಧಿಕಾರ ಲಾಲಸಾಸಕ್ತಿಯಿಂದ ಕದಡಿ ಹೊಲಸಾದ ರಾಜಕೀಯ ರಂಗವನ್ನು ಪೂರಾ ಬಿಟ್ಟು ರಚನಾತ್ಮಕ ಕಾರ್ಯದಲ್ಲಿ ತೊಡಗಿದ ಮಹಾ ವ್ಯಕ್ತಿಗಳಾದ ಜಯಪ್ರಕಾಶರೇ, ನಿಮ್ಮನ್ನನುಸರಿಸಿ ರಾಜಕೀಯವನ್ನು ಬಿಟ್ಟ ನಾನು (ಎಲೇ ಮುರಾರಿ, ಬಸಣ್ಣ, ಸಂಕಣ್ಣ, ಹುಚ್ಚಣ್ಣಗಳ ಕೈಲಿ ಒದಿಸ್ಕೊಂಡು ಬಿಟ್ಯೋ, ಏನು ಹಂಗೇ ಬಿಟ್ಯೋ ಎಂದು ಪ್ರೇಕ್ಷಕ ವೃಂದದಲ್ಲೊಬ್ಬ ಕೂಗಿದ) ನಿಮ್ಮನ್ನು—ಕ್ಷೀ—ಹಾರ್ದಿಕ ಸ್ವಾಗತ ಬಯಸುತ್ತೇನೆ. ತಮ್ಮ ದಿವ್ಯ ವಚೋಸುಧೆ ನನ್ನ ಮನಸ್ಸನ್ನು ಬೆಳಗಲಿ" ಎಂದ.

ಅಷ್ಟರಲ್ಲೇ ಅವನನ್ನು ಜನರ ಗುಂಪೊಂದು ಮುತ್ತಿತು. ಅವನು ಕೆಳಗಿಳಿದು ಅವರೊಡನೆ ಹೋದ. ತಮ್ಮ ಕೋಮು ಮುಂದುವರಿದ ಕೋಮೆಂದು ಸರ್ಕಾರ ನಿರ್ಧರಿಸಿದ್ದರಿಂದ "ಇಲ್ಲ. ನಮ್ಮನ್ನು ಹಿಂದುವರಿಸಿರಿ" ಎಂಬ ಚಳುವಳಿಯಲ್ಲಿ ಭಾಗ ವಹಿಸಲು ಮುರಾರಿ ಹೋಗಿಬಿಟ್ಟ.

ಇತ್ತ ಜನರ ಗುಂಪಿನ ಒಂದು ಮೂಲೆಗೆ ಸುಮಾರು ಇಪ್ಪತ್ತು ವಯಸ್ಸಿನ ಒಬ್ಬ ಸುಂದರ ಯುವತಿ ಬಂದಳು ಅವಳು ಮುಗಿಲು ಹಳ್ಳಿಯವಳಲ್ಲ. ಅವಳ ಕಡೆ ಸಭಿಕರಲ್ಲಿ ಅರ್ಧ ಜನ ನೋಡಲಾರಂಭಿಸಿ ವೇದಿಕೆಗೆ ಬೆನ್ನು ತೋರಿಸಿದರು. ಆಗ ಭಂಗಿ ಬಸಣ್ಣ ವೇದಿಕೆಯಿಂದಿಳಿದು ಹಾಗೆಯೇ ಆವರಣದ ಕಾಂಪೌಂಡ್ ಹಾರಿ ಪರಾರಿಯಾದ. ಮರು ದಿನ ನಮಗೆ ತಿಳಿದ ಸುದ್ದಿಯಂತೆ ಹೋದ ವರ್ಷ ಅವಳಿಂದ ಎರಡು ಸಾವಿರ ತೆಗೆದುಕೊಂಡ ಬಸಣ್ಣ, ಅವಳಿಗೆ ಸೀಟು ಕೊಡಿಸಲಿಲ್ಲ.

ಸಭೆಯ ಗುಜುಗುಂಪಲನ್ನು ಕೇಳಿ ಸರ್ವೋದಯ ವೇದಿಕೆಯ ಮೇಲೆ ಕುಳಿತ ಕಾಂಗ್ರೆಸ್ ಕಪ್ಪಣ್ಣನವರು ಆ ತರುಣಿ ಬರುತ್ತಿದ್ದ ಕಡೆಗೆ ತಿರುಗಿದರು. ಅವರೆದೆಗೆ ಶೂಲ ಇರಿದ ಹಾಗಾಯಿತು. ಅವಳ ವಯಸ್ಸಿನ ಮಗಳು ಅವರಿಗೂ ಇದ್ದಳು. ಅವಳ ಮದುವೆಯಾಗಿರಲಿಲ್ಲ. ಅವಳಿಗಿಂತ ದೊಡ್ಡವಳು ಅವಳಿಗೂ ವಿವಾಹವಿಲ್ಲ. ಅವಳಿಗಿಂತ ದೊಡ್ಡ ಮಗಳು? ಹರಹರಾ....ಕಪ್ಪಣ್ಣನವರು ದುಃಖವಾದಾಗ ದಿಲೀಪ್ ಕುಮಾರ್ ಮಾಡುವಂತೆ ಮುಖ ಮುಚ್ಚಿ ಕುಳಿತರು.

ಅಷ್ಟರಲ್ಲಿ ಜೆ, ಪಿ. ಯವರು ಎದ್ದು ನಿಂತರು.

"ಫ್ರೆಂಡ್ಸ್" ಎಂದರು. "ನೀವೆಲ್ಲಾ ಹೆಚ್ಚಿನ ಸಂಖ್ಯೆಯಲ್ಲಿ ಸೇರಿ ಸರ್ವೋದಯ ಸಂದೇಶ ಕೇಳಲು ಬಂದಿದೀರಿ. ಮುಗಿಲು ಹಳ್ಳಿ ಸರ್ವೋದಯದ ಇತಿಹಾಸದಲ್ಲಿ ತನ್ನದೇ ಆದ ಸ್ಥಾನ ಪಡೆದಿದೆ.

ನಾನು ಈ ಹಿಂದೆ ರಾಜಧಾನಿಯಲ್ಲಿ ಹೇಳಿದಂತೆ ನಾವೀಗ ಸರ್ವೋದಯ ಮುನಿಸಿಪಾಲಿಟಿಗಳನ್ನು ಸೃಷ್ಟಿಸಬೇಕು...."

ಅವರು ಹೀಗೆ ಆರಂಭಿಸಿದ ಭಾಷಣ ಕೇಳುವವರು ಸುಮಾರು ನೂರಿನ್ನೂರು ಜನರಿರಬಹುದು. ಅವರ ಗಮನ ಮುನಿಸಿಪಾಲಿಟಿ ಆಫೀಸಿನ ಕಡೆಗಿತ್ತು. ಅವರೆಲ್ಲಾ ಏನೋ ಒಂದು ಅದ್ಭುತ ಪವಾಡ ನಿರೀಕ್ಷಿಸುತ್ತಿದ್ದರು.

ಅವರ ನಿರೀಕ್ಷೆ ಸಫಲ! ಮುನಿಸಿಪಾಲಿಟಿ ಕಡೆಯಿಂದ ಭಾರೀ ಗದ್ದಲದ ಸದ್ದು ಕೇಳಲಾರಂಭಿಸಿತ್ತು. ಅದು ಜಯಕಾರದ ಸದ್ದು. ಮಹಾರುದ್ರನ ಪಾರ್ಟಿಯ ಕೆಲ ಸದಸ್ಯರನ್ನು ಅವನು ತೀರ್ಥಯಾತ್ರೆಗೆ ಕಳಿಸಿದ್ದನಲ್ಲ, ಅವರು ಮತದಾನದ ಹೊತ್ತಿಗೆ ಸರಿಯಾಗಿ ಹಿಂತಿರುಗಿದ್ದರು. ಮಹಾರುದ್ರ (ಉಲ್ಲೂಕೇಶ್ವರ ಭಕ್ತ) ನ ಕಡೆಯವರು ಜಯಕಾರ ಮಾಡಿದರು. ಅಷ್ಟರಲ್ಲೇ ರಾಸಭೇಶ್ವರ ಭಕ್ತರು ಕಾರಿನ ಮೇಲೆ ಕಲ್ಮಳೆ ಕರೆದರು. ಕೈ ಕೈ ಮಿಲಾವಣೆ, ಹಾ ಹಾ ಹೂ ಹೂ ಅಯ್ಯೋಕಾರಗಳ ಸದ್ದು; ಕೇಳಿ ರೋಮಾಂಚಿತರಾದ ಕೆಲವು ಸರ್ವೋದಯ ಸಭಿಕರು ಅತ್ತ ಧಾವಿಸಿದರು.

ಇದೆಲ್ಲವನ್ನೂ ಕಡೆಗಣಿಸಿ ಆತ್ಮಚಿಂತನದಲ್ಲಿ ಮಗ್ನನಾಗಿದ್ದ—ಸಾಹುಕಾರ ಮಾದೇವಣ್ಣ. ಅವನ ಮಿಲ್ಲಿಗೆ ಸರಕಾರದಿಂದ ಎಂಟು ಲಕ್ಷ ಸಾಲ ಮಂಜೂರು ಆಗಬೇಕಾದ್ದು ಇನ್ನೂ ಆಗಿರಲಿಲ್ಲ. ಯಾರಿಗೆ ಏನು ಕಡಿಮೆ ಮಾಡಿದ್ದರಿಂದ ಅದು ಮಂಜೂರಾಗಲಿಕ್ಕಿಲ್ಲ ಎಂದೇ ಅವನ ಚಿಂತೆ. ತಾನೆಲ್ಲಿದೇನೆ, ಏಕೆ ಬಂದಿದೇನೆ ಎಂಬುದೆಲ್ಲಾ ಅವನಿಗೆ ಮರೆತು ಹೋಗಿದೆ.

ಜೇಪಿ ಹೇಳುತ್ತಿದ್ದಾರೆ "........ನಾವೆಲ್ಲಾ ಸ್ವಾವಲಂಬನ ಕಲಿಯದಿದ್ದರೆ ಪ್ರಜಾಪ್ರಭುತ್ವ ಯಶಸ್ವಿಯಾಗಲಾರದು. ಜರ್ಮನಿ, ಜಪಾನ್ ಜನತೆಗಳ ಉದ್ಯಮಶೀಲತೆಯಿಂದ ನಾವು ಕಲಿಯಬೇಕು. ಸರಕಾರದ ಸಹಾಯವನ್ನು ಎಂದೂ ಬಯಸಬಾರದೆಂದಲ್ಲ. ಅದರ ಮುಖನೋಡುತ್ತಾ ಕುಳಿತುಕೊಳ್ಳಬಾರದು........"

"ತಗ್ಗೈಲೇ ಇವ್ನ....ಭಾಳಹೊತ್ತಾತು ಸುಮ್ಕೆಕುಂತು" ಎಂದುಕೊಂಡ ಮಾದೇವಣ್ಣ "ಹೌದೋ ನನಸರ್ಧರ!" ಎಂದುದ್ಗರಿಸಿ ಚಪ್ಪಾಳೆ ತಟ್ಟಿದ• ಮುನಿಸಿಪಾಲಿಟಿ ಕಡೆಗೆ ರಿಸರ್ವ್ ಪೋಲೀಸ್ ವ್ಯಾನುಗಳು ಧಾವಿಸುತ್ತಾ ಮಾಡಿದ ಹಾರನ್ ಸದ್ದು ಅದಕ್ಕೆ ಬೆಂಬಲವಿತ್ತಿತು.

ಜಯಪ್ರಕಾಶರು ತಮ್ಮ ಭಾಷಣದಲ್ಲಿ ತಾವು ರಾಜಕೀಯದಲ್ಲಿ ಹೆಚ್ಚು ಆಸಕ್ತಿ ವಹಿಸದೆ ಸರ್ವೋದಯಕ್ಕಾಗಿಯೇ ಶ್ರಮಿಸುವುದಾಗಿ ಹೇಳಿದರು. ಸರ್ವೋದಯ ಪಾತ್ರೆಯಿಂದ ಬಂದ ಹಣ ಹೀಗೆ ಹೀಗೆ ಎಂದರೆ ಮುಖ್ಯವಾಗಿ ಶಾಂತಿಸೇನಾ ಸಂಘಟಕರ........ಎಂದು ಮುಂತಾಗಿ ಹೇಳಿದರು.

ಬೆಳಗಿನ ಕೂರ್ಪಾದ ಬಿಸಿಲು ಕೆನ್ನೆಯಮೇಲೆ ಬಿದ್ದು ಚುರುಚುರು ಎನ್ನಲಾರಂಭಿಸಿತ್ತು. ಪ್ರೇಕ್ಷಕರಲ್ಲನೇಕರಿಗೆ ಸರ್ವೋದಯಕ್ಕಿಂತ ಹೆಚ್ಚು ಜರೂರಾಗಿ ದೋಸೆಗಳು ಬೇಕಾಗಿದ್ದವು.

ಅತ್ತ ನಮ್ಮೂರಿನ ಸರ್ವೋದಯ ಮುನಿಸಿಪಾಲಿಟಿಯ ಮುಂದಿನ ಅಧ್ಯಕ್ಷ ಚುನಾವಣೆಯ ಪರಿಸ್ಥಿತಿ, ಕೈಮೀರಿ ಹೋಗುವುದರಲ್ಲಿತ್ತು. ನಮ್ಮೂರಿನ ಶಾಂತಿ ಸೇನಾ ಸಂಘಟರ ರಾಮಾಚಾರಿ ಸರ್ವೋದಯ ಸಭೆಯಲ್ಲೂ ಇಲ್ಲ! ಪುರಸಭೆ ಬಳಿಯಲ್ಲೂ ಇಲ್ಲ! ಮನೆಯಲ್ಲೂ ಇಲ್ಲ. ಪಾಂಡವರು ಜೂಜಾಡಿ ಕೆಡುತ್ತಿದ್ದಾಗ, ಸಾಳ್ವಪುರಿಗೆ ಹೋಗಿದ್ದ ಕೃಷ್ಣನಂತೆ ಅವನು ಮಾಯವಾಗಿದ್ದ. ಅವನನ್ನು ಹುಡುಕಲು ಎಲ್ಲರೂ ಪ್ರಯತ್ನಿಸಿ ವಿಫಲರಾಗಿದ್ದರು. ಸರ್ವೋದಯ ಪಾತ್ರೆಗಳ ಜೊತೆಗೆ ಶಾಂತಿಸೇನಾ ಸಂಘಟಕ ಎಲ್ಲೋ ಮಾಯವಾಗಿದ್ದ! ಕಾರಣವನ್ನು ನಾವು ಮತ್ತೆ ಹೇಳಬೇಕೇ?

ಹೀಗಾಗಿ ನಮ್ಮ ಮುಗಿಲುಹಳ್ಳಿ ಈಗ ಶೇ|| ೭೫ ಸರ್ವೋದಯದ ಊರಾಗಿ ಇಡೀ ಭಾರತಕ್ಕೆ ಮಕುಟಮಣಿಯಂತಿದೆಯೆಂದು ಹೇಳಲು ನಮಗೆ ತುಂಬಾ ಹೆಮ್ಮೆ. ಜಯಪ್ರಕಾಶರು ಡಲ್ಹೈಲಾಮಾ ಸಂಸ್ಥಾಪಕರಾಗಲು ಡೆಲ್ಲಿಗೆ ಹೋಗಿದ್ದಾರೆ. ಆದರೂ ನಮಗೆ ಚಿಂತೆಯಿಲ್ಲ. ಮತ್ತೊಮ್ಮೆ ಸರ್ವೋದಯ ಬಂದರೆ, ನಾವು ಶೇ|| ನೂರು ಸರ್ವೋದಯ ಕಾಣಬಹುದು.

ವಿನೋಬಾರವರ ಸರ್ವೋದಯ ಕಾಲ್ನಡಿಗೆಯಲ್ಲಿ ಬಂತು. ಜಯಪ್ರಕಾಶರ ಸರ್ವೋದಯ ಜೀಪಿನಮೇಲೆ ಬಂತು. ಮುಂದೆ ಬರುವ ಸರ್ವೋದಯ "ಪುಷ್ಪಕ" ದಮೇಲೆ ಬರುವುದೋ ಏನೋ ? ಏಕೆ ಬರಬಾರದು ?

—ಅ. ರಾ. ಸೇ.

ವಾಚಕರ ಹಿತವಾದ

'ಕೊರವಂಜಿ' ಸಂಪಾದಕರಿಗೆ

ವಂದನೆಗಳು

'ಕೊರವಂಜಿ' ರಾಜಕೀಯದಿಂದ ದೂರ ಇರಲು ಸಾಧ್ಯವೇ ಇಲ್ಲವೇ ?

ನಾವು ಪತ್ರಿಕೆಗಳಲ್ಲಿ ಓದುವ ರಾಜಕೀಯ ಸಾಲದೇ? ರೇಡಿಯೋಲಿ ಕೇಳುವುದು ಕಮ್ಮಿಯೇ ?

ಪತ್ರಿಕೆಗಳ ಸುದ್ದಿಯಿಂದ ಕೊರವಂಜಿಯ ಕಡೆ ಮುಖ ತಿರುಗಿಸಿದರೆ ಅಲ್ಲೂ ಅದೇ ಗೋಳು. ಈಗಿನ ಕೊರವಂಜಿ ಓದಿದರೆ ನಗು ಬರೋದಿಲ್ಲ. ಹಾಗಂತ ವಿಷಾದದಿಂದ ತಿಳಿಸಬೇಕಾಗಿದೆ.

ಹಳೆಯ ಕೊರವಂಜಿಗಳಲ್ಲಿ ಬರುತ್ತಿದ್ದ 'ರಾವಣಭಾತು' ಇತ್ಯಾದಿಗಳ ಸವಿ ಖಾರ, ನಮಗೆ ಇನ್ನು ಸಿಕ್ಕಲಾರದೇ ?

ಆರ್. ಕೆ. ಲಕ್ಷ್ಮಣ್‌ರು ನಿರ್ಮಿಸುತ್ತಿದ್ದ ವ್ಯಂಗ್ಯ ಚಿತ್ರಗಳು ಆ ದರ್ಜೆಯವು ನಮಗೆ ಅಲಭ್ಯವೇ ?

ಶ್ರೀಮದ್ ಗಾಂಭೀರ್ಯದ ದಪ್ಪ ಧರ್ಮಾವರದ ಸೀರೆಯ ಯುಗ ಹಿಂದೆ ಸರಿದು ನೈಲಾನ್ ಯುಗಕ್ಕೆ ದಾರಿ ಕೊಡುತ್ತಿದೆ. ಹಾಗೆಯೇ ಇದೂ ಎಂದು ಭಾವಿಸೋಣವೇ ?

—ತ್ರಿವೇಣಿ

ತ್ರಿವೇಣಿಯವರಿಗೆ ಆದರದ ವಂದನೆಗಳು.

ತಮ್ಮ ಅಭಿಪ್ರಾಯ ಸೂಚಿಸಿರುವ ಕಾರಣ ದಿಟವೆಂದೇ ನನಗೂ ಅನ್ನಿಸಿದೆ. ಸುತ್ತಲಿನ ವಾತಾವರಣವನ್ನು ಮೊದಲು ಮೊದಲು ನೋಡಿ ನಗುತ್ತಿದ್ದೆ. ಕಿಲ ಕಿಲನೆ ತಿಳಿ ತಿಳಿಯಾಗಿ ನಗುತ್ತಿದ್ದೆ. ಆದರೆ ನನಗೆ ವಯಸ್ಸಾಗುತ್ತ ಬಂದು, ನಮಗೆಲ್ಲಾ ಸ್ವಾತಂತ್ರ್ಯ ಅನ್ನೋದು ಬಿರಿಸಿಡಿಲಿನಂತೆ ಬಡಿದು, ಏರು ಪೇರು ಹೆಚ್ಚಾಗಿ, ನಗುವಿಗೆ ಮೊದಲೇ ಕೋಪ ಉಕ್ಕುತ್ತೆ. ಬಡ ಕೊರವಂಜಿ ಕೋಪ ಮುಳಿಡಬ್ಬಿ ಮೇಲೇ.

ಈಗ ತಿಳಿದು ನಗೋಣವೇ ಅಂತ ಅನ್ನಿಸುತ್ತಿದೆ

ಚಿ॥ ಲಕ್ಷ್ಮಣ್ ರಂತಹ ಪ್ರತಿಭಾವಂತರು ನಮ್ಮ ಪಾಲಿಗೆ ಈಗ ಗಗನದ ಕುಸುಮ. ಸಾಲಮಾಡಿ ಕಾಲಹಾಕುವ ಕೊರವಂಜಿಗೆ ಹೇಗೆ ಸಿಕ್ಕಾರು ? ಆದರೂ ಹಿಂದಿನಂತೆ ಕಾಲಭೈರವನನ್ನು ಅತಿಕ್ರಮಿಸಿ ನಗೆಯಾಡಲು ಪ್ರಯತ್ನಿಸುತ್ತೇನೆ.

ನಿಮ್ಮ

—ಕೊರವಂಜಿ

"ಲಂಡನ್ನಿನ ಕಾಗದಗಳು ಮತ್ತು ಕ್ರಿಕೆಟ್"

ಬೆಲ್ಹನ್ ಹ್ಯಾಂ ರಸ್ತೆ,,
ಲಂಡನ್ ೧೩.

ಪ್ರಿಯ ಸಂಪಾದಕರೇ,

ಭಾರತದ ಕ್ರಿಕೆಟ್ ಟೀಮಿನವರು ಈಗ ಇಲ್ಲಿಗೆ ಬಂದಿರುವುದು ನಿನಗೆ ಗೊತ್ತೇ ಇದೆ. ದೇಶದ ಪ್ರೇಮ ಉಕ್ಕಿ ಬಂದು, ನಾನು ಕ್ಯಾಪ್ಟನ್ ಗಾಯಕವಾಡರನ್ನು ಭೇಟಿಯಾಗಲು ಹೋದ ಗುರುವಾರ ಸಂಜೆ ಹೋಗಿದ್ದೆ. ಆತ ರಾತ್ರಿ ಊಟಕ್ಕೆ ಎಲ್ಲಿಗೋ ಹೋಗಿದ್ದವರು ಹಿಂತಿರುಗುವಾಗ ೧೧ ಗಂಟೆ ಆಗಿತ್ತು. ಆದರೂ ನನ್ನೊಡನೆ ಅತಿ ವಿಶ್ವಾಸದಿಂದ ಒಂದು ಗಂಟೆ ತನಕ ಮಾತಾಡುತ್ತಿದ್ದರು. ಮಾರನೆ ದಿನ ಆಟ ನೋಡಲು ಹೋಗಿದ್ದೆ. ನಿದ್ರೆಗಣ್ಣಿನಲ್ಲೇ ಆಡುತ್ತಾ ಇದಾರೇನೋ ಎನ್ನಿಸಿತು. ಸ್ಕೋರ್ ವಿಚಾರ ಹೇಳಿಕೊಳ್ಳೋ ಹಾಗೇನೂ ಇಲ್ಲ. ಆದರೂ ಆಟದ ವಿಚಾರ ಹೇಳಿಕೊಳ್ಳೋಣ ಅಂದರೆ ಅದು ಕನಸಿನಲ್ಲಿ ಕಂಡ ಆಟದಂತಿತ್ತು. ಮಲೆನಾಡಿನಲ್ಲಿ ದನಾನ ಚಿರತೆ ಹೊಡೆದುಕೊಂಡು ಹೋದಮೇಲೆ ಕೊಟ್ಟಿಗೆ ಬಾಗಿಲು ಹಾಕಿದರು ಅಂತ ಗಾದೆ ಇಲ್ಲವೆ? ಅದು ಜ್ಞಾಪಕಕ್ಕೆ ಬಂತು ಇವರು ಆಡಿದ್ದು ನೋಡಿ ಚೆಂಡು ಕಾಲ ಹತ್ತಿರವೇ ಬೌಂಡರಿಯತ್ತ ಹಾದುಹೋದಮೇಲೇ ಇವರ ಕೈಗಳು ಜೇಬಿನಿಂದ ಇಳಿಬೀಳುತ್ತಿದ್ದುವು!

ರಾತ್ರಿ ಹೆಚ್ಚು ಹೊತ್ತು ಮಾತಾಡಿಸುತ್ತಾ ಆಟಗಾರನಿಗೆ ನಿದ್ರೆ ಇಲ್ಲದಂತೆ ಮಾಡಿದ್ದರಿಂದಲೇ ಹೀಗಾಯ್ತೋ ಎಂದು ಮನಸ್ಸು ಅಳುಕುತ್ತಿದೆ. ನನ್ನಿಂದಲೇ ನಮ್ಮವರ ಸೋಲು ಎಂಬ ಶಂಕೆ ಕಾಡುತ್ತಿದೆ.

ಈ ಪೇಚಿನಲ್ಲಿ ಸಿಕ್ಕಿರುವ ನನ್ನ ಮನಶ್ಶಾಂತಿಗೆ ಏನಾದರೂ ಪರಿಹಾರ ಮಾರ್ಗ ಸೂಚಿಸುತ್ತೀರಾ?

ನಿಮ್ಮವ,
ಡಾ|| ಆದಿರಾಯ,

* * * *

ಬರ್ಮಿಂಗ್ ಹ್ಯಾಂ ಅಡ್ಡರಸ್ತೆ ೬,
ಮೂರನೇ ಮನೆ ಮಹಡಿ.

ಪ್ರಿಯ ಸಂಪಾದಕರೇ!

ಮೀರ್ ಸಾದಕನಿಗೆ ದೇಶದ್ರೋಹಿ ಎಂಬೆಸರಾಯ್ತು ಎಂದು ಲಾವಣಿಕಾರರು ಹಾಡುತ್ತಿದ್ದುದು ಈಗ ನನ್ನ ನೆನಪಿಗೆ ತುಂಬಾ ಬರಹತ್ತಿದೆ. ಮೀರ್ ಸಾದಕನಂತೆ

ನಾನೂ ದೇಶದ್ರೋಹಿಯಾಗಿಬಿಟ್ಟಿನೇನೋ ಎಂದು ಹೆದರಿಕೆ ಆಗುತ್ತಿದೆ.
ಯಾಕೆ? ಅಂತೀರಾ?

ಭಾರತದ ಸರ್ಕಾರದವರು ಸಂಡಿಗೆ ತಯಾರಿಕೆಯನ್ನು ಕಲಿಯಲು ಇಲ್ಲಿಗೆ ಕಳಿಸಿಕೊಟ್ಟ ನಿಯೋಗದಲ್ಲಿ, ನನ್ನ ಸೋದರ ಮಾವಂದಿರೂ ಇದ್ದರು. "ಹೇಗೂ ಹೋಗ್ತಿಯಲ್ಲಾ ಅಣ್ಣ! ನಮ್ಮ ರಾಮೂಗೆ ಬೆಣ್ಣೆಮುಚ್ಚ್ಕೋರೆ ಅಂದರೆ ಬಲು ಪ್ರೀತಿ. ಇಂಗ್ಲೆಂಡಿನಲ್ಲಿ ಅದೆಲ್ಲಿ ಸಿಗುತ್ತೆ? ನೀನು ಈಗ ಹೋಗುವವನಿದ್ದಿ. ಒಂದು ಡಬ್ಬ ಬೆಣ್ಣೆ ಮುಚ್ಚೋರೆ ಕೊಡುತ್ತೇನೆ ತೆಗೆದುಕೊಂಡು ಹೋಗಿ, ಅವನಿಗೆ ಕೊಡು" ಎಂದು ನಮ್ಮ ಅಮ್ಮ, ಅಣ್ಣನ ಕೈಲಿ ಕೊಟ್ಟು ಕಳಿಸಿದ್ದರು. ನಮ್ಮ ಸೋದರ ಮಾವ ಅದನ್ನು ಕೊಡುತ್ತಾ "ಈ ವರ್ಷಕ್ಕೆಲ್ಲಾ ಸಾಕಾಗಬಹುದು ಅಂತ ಕಾಣುತ್ತೆ, ಡಬ್ಬದ ಗಾತ್ರ ನೋಡಿದರೆ. ಇದನ್ನು ವಿಮಾನದಲ್ಲಿ ತರೋದಕ್ಕಾದಷ್ಟು ಖರ್ಚೇ, ನನ್ನನ್ನು ತರೋದಕ್ಕೂ ಆಯಿತು. ಆದರೆ ನಿಯೋಗದ ಖರ್ಚಿನಲ್ಲಿ ಸೇರಿದ್ದಾದುದ ರಿಂದ ನನ್ನ ಕೈ ಏನೂ ಕಚ್ಚಲಿಲ್ಲ. ಚೆನ್ನಾಗಿದೀಯಾ ಅಂತ ಕೇಳೊ ಗೋಜೇನೂ ಇಲ್ಲ. ಇಲ್ಲಿದ್ದರೂ ಬೆಣ್ಣೆಕೃಷ್ಣನ ಹಾಗೇ ಕಾಣುತ್ತಿದ್ದಿ" ಎಂದು ಸೀಮೆಯೆಣ್ಣೆ ಟಿನ್ನೊಂದನ್ನು ಕೊಟ್ಟರು. ಟ್ಯಾಕ್ಸಿಯಲ್ಲಿ ಅದನ್ನು ಸಾಗಿಸಿಕೊಂಡು ನಮ್ಮನೆಗೆ ಬಂದೆ.

ದಾರಿಯಲ್ಲಿ ನಮ್ಮ ದೇಶದ ಕ್ರಿಕೆಟ್ ಆಟಗಾರರಲ್ಲಿ ಮೂವರು ಸಣ್ಣ ವಯಸ್ಸಿನವನು ನಿಂತಿದ್ದರು. ನನ್ನ ಟಾಕ್ಸಿಯಿಂದ ಘಮ ಘಮ ಅವರಿಗೆ ಹೊಡೆದಿರಬೇಕು ಅವರೂ ಸರ್‍ರಂತ ಬಂದು ಟ್ಯಾಕ್ಸಿ ಹಿಡಿದು ನನ್ನನ್ನೇ ಹಿಂಬಾಲಿಸಿದರು. ನಾನು ಇಳಿದಾಗ ಅವರೂ ಇಳಿದು ನನ್ನ ಹತ್ತಿರಕ್ಕೆ ಬಂದರು. ಪರಸ್ಪರ ಪರಿಚಯ ಮಾಡಿಕೊಂಡೆವು. ಮೂವರೂ ಸಹಾಯವೆಸಗಿ ಟಿನ್ನನ್ನು ನನ್ನ ಕೊಠಡಿಗೆ ಸಾಗಿಸಿಕೊಟ್ಟರು. ಒಡೆಯರೂ ಸಹಾಯ ಮಾಡಿದರು. ಒಂದೊಂದು ತಟ್ಟೆ ಬೆಣ್ಣೆಮುಚ್ಚೋರೆ ಕೊಟ್ಟೆ. ಮೆಲ್ಲಗೆ ತಿಂದು ತೇಗಿ ನಾಲಗೆಯನ್ನು ಚಪ್ಪರಿಸಿದರು. ಬಲು ಚೆನ್ನ ಬಲು ರುಚಿ ಅಂದರು. ನಾಳೆ ಕ್ರಿಕೆಟ್ ಪಂದ್ಯವಿದೆ. ನೀವೂ ಬಂದು ಉತ್ತೇಜನ ಕೊಡಿ ಎಂದು ಟಿಕೆಟ್ಟೊಂದನ್ನು ಕೊಟ್ಟರು. ಮೂರು ಪೊಟ್ಟಣ ಬೆಣ್ಣೆಮುಚ್ಚೋರೆಯನ್ನು ಅವರಿಗೆ ಕೊಟ್ಟೆ. ದೊಡ್ಡಂಗಿಯ ಒಳ ಜೇಬಿನಲ್ಲಿ ಇಟ್ಟುಕೊಂಡು ಧನ್ಯವಾದ್ ಹೇಳಿ ಹೊರಟು ಹೋದರು.

ಮಾರನೆ ದಿನ ಟಿಕೆಟ್ ದಂಡವಾಗುತ್ತಲ್ಲ ಅಂತ ಕ್ರಿಕೆಟ್ ಆಟಕ್ಕೆ ಹೋದೆ. ಈ ಮೂರು ಜನರೂ ಫೀಲ್ಡ್ ಮಾಡುತ್ತಿದ್ದರು. ನೋಡುತ್ತಲೇ ಇದ್ದೇನೆ! ಷರಾಯಿ ಜೇಬಿಂದ ೨ ನಿಮಿಷಕ್ಕೊಂದು ಸರ್ತಿ ಏನನ್ನೋ ತೆಗೆದುಕೊಂಡು ಬಾಯಿಗೆ ಹಾಕಿಕೊಂಡು ಚಪ್ಪರಿಸುತ್ತಿದ್ದರು.

ಕ್ಯಾಚ್ ಬಂದಾಗ ಎರಡೂ ಕೈ ಕೊಟ್ಟು ಹಿಡಿದೇನೋ ಹಿಡಿಯುತ್ತಿದ್ದರು. ಆದರೆ ಚೆಂಡು ಜಾರಿ ಕೆಳಕ್ಕೆ ಬಿದ್ದುಬಿಡುತ್ತಿತ್ತು!

ಈಗ ಗೊತ್ತಾಯಿತೇ ಸಂಪಾದಕರೇ! ನಾನು ಹಿಂದಿನ ದಿನ ಕೊಟ್ಟಿದ್ದ ಬೆಣ್ಣೆ ಮುಚ್ಚೋರೆಯನ್ನು ಜೇಬಿನಲ್ಲಿಟ್ಟುಕೊಂಡು, ಮುರುಕು ಮುರುಕಾಗಿ ಆಟದ ಮೈದಾನದಲ್ಲಿ ತಿನ್ನುತ್ತಿದ್ದ ಕಾರಣ, ಕೈ, ಬೆರಳುಗಳೆಲ್ಲಾ ಬೆಣ್ಣೆಯಿಂದ ಜಿಡ್ಡಾಗಿ ಹಿಡಿದ ಕ್ಯಾಚೂ ಜಾರಿಬಿಡುತ್ತಿತ್ತು.

ನಮ್ಮ ಹುಡುಗರು ಬಲು ಚಂದದ ಆಟಗಾರರು ಆಹರೆ ನಾನು ಬೆಣ್ಣೆ ಮುಚ್ಚೋರೆಯ ಆಶೆ ತೋರಿಸಿ, ಅವರು ಸೋತು ದೇಶದ ಕೀರ್ತಿಯನ್ನೇ ಕಳಂಕ ಗೊಳಿಸುವ ಹಾಗಾಯ್ತು. ಇದಕ್ಕೆಲ್ಲಾ ನಾನೇ ಕಾರಣ.

ದೇಶದ್ರೋಹಿ ಎಂಬ್ಹೆಸರಾಯ್ತು ನನಗೆ.

ಇದಕ್ಕೇನಾದರೂ ಪ್ರಾಯಃಚಿತ್ತ ಸೂಚಿಸಿ ಸಂಪಾದಕರೇ

ನಿಮ್ಮ ವಿಧೇಯ,
ರಾಮು.

* * * *

ಬ್ರಿಸ್ಟಲ್, ಇಂಗ್ಲೆಂಡ್

ಮಿಸ್ಟರ್ ಸಂಪಾದಕರೇ !

ನಿಮ್ಮ ಪತ್ರಿಕೆಗೆ ನಾನು ಹದಿನಾರು ವರ್ಷಗಳಿಂದ ಚಂದಾದಾರನಾಗಿರುವುದು ನಿಮಗೆ ಗೊತ್ತಿರಬಹುದು. ಆ ವಿಶ್ವಾಸದಿಂದ ಈ ಪತ್ರ ಬರೆಯುತ್ತಿದ್ದೇನೆ. ಇಲ್ಲಿಗೆ ಓದಲು ಬಂದು ೨೦ ವರ್ಷಗಳಾಯ್ತು. ಇಲ್ಲಿಯೇ ಸಂಸಾರ ಮಾಡಿಕೊಂಡು ಸುಖವಾಗಿದ್ದೇನೆ. ಆದರೂ ನಮ್ಮ ಹಿಂದೂ ಧರ್ಮದ ಒಂದು ಹಬ್ಬ ಹರಿದಿನವನ್ನು ಮರೆಯದೆ ಆಚರಿಸುತ್ತಿದ್ದೇವೆ. "ವೆ" ಎಂತ ಬರೆಯುವುದರ ಕಾರಣ ಇಷ್ಟೇ! ನನ್ನ ಲಾಂಕಾಷೈರ್ ಹೆಂಡತಿ. ಮದುವೆಯಾದ ಮೇಲೆ ಪೂರ್ಣ ಹಿಂದೂ ಆಗಬೇಕೆಂದು ಹಠ ತೊಟ್ಟು ಅಬ್ಬೆಡುಬಾಯ್ಸ್‌ನ ಹಿಂದೂ ನಡವಳಿಕೆ ಮತ್ತು ಮತ" ಪುಸ್ತಕವನ್ನು ಚೆನ್ನಾಗಿ ಓದಿ, ಅದರಂತೆಯೇ ಮನೆ ಸಂಸಾರ ನಡೆಸುತ್ತಿದ್ದಾಳೆ. ನನಗೆ ಇವೆಲ್ಲಾ ಯಾವುದೋ ಜನ್ಮದಲ್ಲಿ ಕಂಡ ಹಾಗೆ ಕಾಣಿಸುತ್ತಿದೆ. "ಸತ್ಯನಾರಾಯಣನ ಪೂಜೆ ಮಾಡಿ, ನಮ್ಮ ಭಾರತದ ಕ್ರಿಕೆಟ್ಟಿನ ಆಟಗಾರರು ಬಂದಿದ್ದಾರೆ. ಅವರಿಗೆ ಶುಭ ಕೋರಿ ಪೂಜೆ ಮಾಡಿ" ಎಂದು ಮೊನ್ನೆ ನನ್ನ ಲಾಂಕಾಷೈರ್ ಹೆಂಡತಿ ಆಗ್ರಹದ ವಿನಂತಿ ಮಾಡಿದಳು. ವ್ರತಮಾಲಿಕಾ ಪುಸ್ತಕ ಕೈಗೆ ಕೊಟ್ಟಳು. ಮಾಡೋದೇನೋ ಆಗುತ್ತೆ, ಆದರೆ ಬ್ರಾಹ್ಮಣರನ್ನು ಕರೆದು ದಕ್ಷಿಣೆ ಕೊಟ್ಟರೆ ಚೆನ್ನಲ್ಲವೇ "ಅಂದೆ. "ಭಾರತದಿಂದಲೇ ಬಂದಿದ್ದಾರೆ ಆಟಗಾರರು ಅವರನ್ನೇ ಕರೆದರಾಗದೋ" ಎಂದು ನನ್ನಾಕೆ ಸಲಹೆ ಮಾಡಿದಳು. ಬಲು ಸೊಗಸು ನೀನಂದ ಮಾತು. ಎಂದು ಆಕೆಗೆ ಹೇಳಿ ಸತ್ಯನಾರಾಯಣನ ಪೂಜೆಗೆ ಬನ್ನಿ ಎಂದು ನಮ್ಮ ಆಟಗಾರರನ್ನು ಭಾನುವಾರ ಕರೆದೆ. ಅವರೂ ಬಂದರು.

ನನ್ನ ಲಾಂಕಾಷೈರ್ ಹೆಂಡತಿ ಎಷ್ಟು ಶಹಣೆ ಅಂತೀರೀ! ದಿವನಾಗಿ ಹತ್ತು ಮಣೆ ಹಾಕಿ ಬಂದವರನ್ನು ಅದರ ಮೇಲೆ ಕೂರಿಸಿದಳು. ನಾನು ಪೂಜೆ ಮಾಡಿದೆ. ಆಕೆ ಲಿಂಗದ ಮೇಲೆ ಸೀರೆಯುಟ್ಟು ದೇವರಿಗೆ ಅರತಿ ಎತ್ತಿದಳು. ಪ್ರಸಾದ ಹಂಚಿಕೆ ಪ್ಲಾಸ್ಟಿಕ್ ದೊನ್ನೆಗಳಲ್ಲಿ. ಒಂಬು ಗಂಟೆಯಾಗಿತ್ತು, ಪೂಜೆ ಸಾಂಗವಾಗಿ ಮುಗಿಯೋ ಹೊತ್ತಿಗೆ.

ಮಣೆಯಿಂದ ಆಹ್ವಾನಿತರು ಏಳೋದಕ್ಕೆ ಸ್ವಲ್ಪ ಪ್ರಯಾಸ ಪಟ್ಟಿದ್ದು ಕಂಡು ಬಂದಿತು. ದೇವರಿಗೂ ನಮಗೂ ನಮಸ್ತೇ ಮಾಡಿ, ಕುಂಕುಮ ಹಣೆಗಿಟ್ಟು ಕೊಂಡು ಹೋದರು. ನಮ್ಮ ಆಟಗಾರರು.

ಮಾರನೇ ದಿನ ನಾವೂ ಆಟ ನೋಡುಕ್ಕೆ ಹೋದೆವು. ನಮ್ಮವರು ಬ್ಯಾಟ್ ಮಾಡುತ್ತಿದ್ದರು. ಅದರೆ ಒಬ್ಬೊಬ್ಬ ಆಟಗಾರನೂ ನೋಡಿ ಸೆರೆದು ನಿಂತ ಬೊಂಬಿನಂತೆ ಇದ್ದನೇ ಹೊರತು ಸ್ವಲ್ಪವಾದರೂ ಬಗ್ಗಲೊಲ್ಲ, ಬಾಗಲೊಲ್ಲ. ಹಾಗಾಗಿ ಆಟ ನಿಸ್ತೇಜವಾಗಿತ್ತು. ಸ್ಕೋರು ಕೋಳಿಮೊಟ್ಟೆಯ ತರಹವೇ ಇತ್ತು ಎಂದು ಹೇಳಬೇಕೇ!

ನನ್ನ ಲಾಂಕಷೈರಿನ ಹೆಂಡತಿಯ ಕಡೆ ತಿರುಗಿ, "ಲೇ! ಡಿಯರ್! ನಿನ್ನ ಸತ್ಯನಾರಾಯನ ಪೂಜೆ ಪ್ರಭಾವ ಇದು. ಮಣೆಮೇಲೆ ಥಂಡಿ ಹವಾದಲ್ಲಿ ಮಡಿ ಯಾಗಿ ಒಂದು ಗಂಟೆ ನಿನ್ನೆ ಕೂತಿದ್ದ ಕಾರಣ, ಟೊಂಕ ಹಿಡಿದುಬಿಟ್ಟಿದೆ ಇವರಿಗೆ. ಬಗ್ಗಲಾರರು, ಬಾಗಲಾರರು ಇವರು ಹೇಗೆ ಆಡಿ ಗೆಲ್ಲಲು ಶಕ್ಯ? ಎಂದೆ.

ನನ್ನ ಲಾಂಕಾಷೈರ್ ಹೆಂಡತಿ ಅಂದಳು. "ದೇವರು ಸತ್ಯ ವರಕೊಟ್ಟ ಕೆಚ್ಚಿದ್ದವರಿಗೆ, ಆಟ ಬಂದವರಿಗೆ—ಟೊಂಕ ಏನು ಬಂತು" ಅಂತ ಹೀಯಾಳಿಸಿದಳು. ದೈವಭಕ್ತಿಯನ್ನು ಪ್ರದರ್ಶಿಸಿದಳು.

ನನಗೇನೋ ಮನಸ್ಸಿಗೆ ಅನಿಸುತ್ತಿದೆ. ಸತ್ಯನಾರಾಯಣನ ಪೂಜೆಗೆ ಕರೆದು ಇವರಿಗೆ ಬೆನ್ನು ಸೆಳೆತ ಬರಿಸಿ, ಆಟದಲ್ಲಿ ಅಪಯಶಸ್ಸು ಬರುವಂತೆ ಮಾಡಿದೆವೋ ಏನೋ ಅಂತ.

ಇನ್ನು ಮೇಲೆ ಇಂಗ್ಲೆಂಡಿನಲ್ಲಿ ಇರೋತನಕ, ಭಾರತದ ದೇವರುಗಳ ಪೂಜೆ ಯನ್ನು ಬಿಟ್ಟು ಬಿಡಲೇ?

ಯೋಚಿಸಿ ತಿಳಿಸುತ್ತೀರಾ?

ನಿಮ್ಮ ಚಂದಾದಾರ
ಉಡುಪಿ ಕೃಷ್ಣಾಚಾರ್ಯ.

ಮೊದಲಿದ್ದ ಹಾಗೇ!!

"ಅಲಮೇಲಮ್ಮನವರ ಮುಖ ನೋಡಬೇಕಾಗಿತ್ತು ಅಂದ್ರೆ! ಒಳ್ಳೆ ಕಳಿತ ಕೆಂಪು ಟೊಮೊಟೋ ಹಾಗಿತ್ತು ಒಂದೊಂದು ಕೆನ್ನೇನೂ. ಅಷ್ಟು ಕೋಪ ಬಂದಿತ್ತು ಅವರಿಗೆ ಇವತ್ತು ಸಂಜೆ ಸಮಾಜದಲ್ಲಿ" ಎಂದಳು ನನ್ನಾಕೆ.

ಟಿಫಿನ್‌ಕ್ಯಾರಿಯರಿನಲ್ಲಿ ತಂದಿದ್ದ ಊಟವನ್ನು ನಾನು ಮೇಜಿನ ಮೇಲೆ ತಟ್ಟೆ ಹಾಕಿ ಹರಡುತ್ತಿದ್ದೆ. "ಯಾಕೆ" ಎಂದು ಕೇಳಿದೆ. ರಾತ್ರಿ ೯ ಗಂಟೆ ಹೊತ್ತಿನಲ್ಲಿ.

ಬಂಡೆಮನೆ ಭಾನುಮತಿಯವರನ್ನು ನಮ್ಮ ಕೇರಿಯ ಕಸೂತಿ ಕ್ಲಬ್ಬಿಗೆ ಅಧ್ಯಕ್ಷಿಣಿಯನ್ನಾಗಿ ಚುನಾಯಿಸಿದರೆಂದು ಸಮಾಜದಲ್ಲಿ ಯಾರೋ ಹೇಳಿದರು. ಅಲಮೇಲಮ್ಮನವರಿಗೆ ಕೇಳಿಸಿತು. ಇಷ್ಟು ವರ್ಷಗಳಿಂದಲೂ, ಮಹಿಳಾ ಚಟುವಟಿಕೆಯ ಯಾವ ಸಮಾಜ ಸಂಸ್ಥೆಗೂ ಅಲಮೇಲಮ್ಮನೇ ಅಧ್ಯಕ್ಷಿಣಿಯಾಗಿ ಆರಿಸಿ ಬರುತ್ತಿದ್ದಳು. ಆದರೆ ಈ ಕೆಲವು ತಿಂಗಳಿಂದ, ಬಂಡೆ ಮನೇನ ಕೊಂಡುಕೊಂಡು ಬಂದ ಭಾನುಮತಿ ಒಂದೊಂದು ಸಂಸ್ಥೆಗೂ ಮೆಲ್ಲನೆ ಅಧ್ಯಕ್ಷಣಿಯಾಗಿ ಆರಿಸಲ್ಪಡುತ್ತಿದ್ದಾಳೆ. ಭಾನುಮತಿಗೆ ಚಿಕ್ಕವಯಸ್ಸು. ರೂಪಿಣಿ, ಐಶ್ವರ್ಯವಿದೆ, ವಿದ್ಯೆ ಇದೆ, ಮಕ್ಕಳಿಲ್ಲ, ಹಾಗಾಗಿ ಹಿರಿಯ ಅಲಮೇಲಮ್ಮನವರು ಹಿಂದೆ ಬೀಳುತ್ತಾ ಇದ್ದಾರೆ. ಅದಕ್ಕೇ ಕೋಪ!

ಅಷ್ಟು ಹೊತ್ತಿಗೆ ಊಟ ಬಡಿಸಿದ್ದೆ. ನಾನು ಊಟಕ್ಕೆ ಕುಳಿತಿದ್ದೆ ನನ್ನಾಕೆಯೂ ಬಂದು ಕುಳಿತಳು. ಅದೇ ನಮ್ಮ ವಾಡಿಕೆ. ಆ ವೇಳೆಗೆ ಯಾರೋ ಬಂದು ಬಾಗಿಲು ತಟ್ಟಿದರು. ತಟ್ಟಿದ ಶಬ್ದ ಕೇಳಿಸದೇ ಇರೋ ಹಾಗೆ ನನ್ನಾಕೆ ತಟ್ಟೇನ ಒರಸಿದಳು. ಇವಳಿಗೆ ಎದ್ದು ಹೋಗಿ ಬಾಗಿಲು ತೆಗೆಯಲು ಬೇಜಾರು, ಹೇಗೂ ಇವಳೇ ಸಂಸಾರದ ಸಂಪಾದನೆ ಮಾಡೋ ಆಕೆ, ಎಂದು ಯೋಚಿಸಿ ನಾನು ಹೋಗಿ ಬಾಗಿಲು ತೆಗೆದೆ. ಒಬ್ಬ ಜವಾನ ಕಾಗದವೊಂದನ್ನು ಹಿಡಿದುಕೊಂಡು ನಿಂತಿದ್ದ. "ಅಮ್ಮಾವ್ರು ಅಮ್ಮಾವ್ರಿಗೆ ಕೊಟ್ಟು ಬಾಂತಂದ್ರು" ಎಂದು ಹೇಳಿ ಕಾಗದವನ್ನು ಕೈಲಿಟ್ಟು ಹೊರಟು ಹೋದ. ಕಾಗದ ಕಚ್ಚಿಕೊಂಡು ಬಾಗಿಲು ಹಾಕಿ, ನಂತರ ಕಾಗದ ಹಿಡಿದುಕೊಂಡು ಊಟದ ಮನೆಗೆ ಹಿಂತಿರುಗಿ ನನ್ನಾಕೆಗೆ ಕೊಟ್ಟೆ. ಆ ವೇಳೆಗೆ ಆಕೆ ಸಾರನ್ನ ಕಲಸಿಕೊಂಡಿದ್ದಳಾದ್ದರಿಂದ ಎಡಗೈಯಲ್ಲೇ ಹಿಡಿದುಕೊಂಡು ಓದಲಾರಂಭಿಸಿದಳು. ಅಲಮೇಲಮ್ಮನ ಕಾಗದ. ರಂಗೋಲಿ ಕ್ಲಬ್ಬಿನ ಅಧ್ಯಕ್ಷಿಣಿಯ ಯಜಮಾನರಿಗೆ ವರ್ಗವಾದಕಾರಣ ಅಧ್ಯಕ್ಷಸ್ಥಾನವು ಖಾಲಿಯಾಗಿದೆಯಂತೆ. ಭಾರತದ ಉದ್ಧಾರಕ್ಕಾಗಿ ಪಂಡಿತಜೀಯವರು ಸರ್ವತೋಮುಖ ಪ್ರಯಾಸ ಪಡುತ್ತಿದ್ದಾರೆ.

ಅಂತಹ ಒಂದು ಮುಖ ಕಲೆಯ ಪ್ರಗತಿ. ಹಗಲಾದರೆ ಕಾಣಿಸುವ ಕಲೆಯ ಒಂದು ಮುಖ ರಂಗೋಲಿ ಇಡುವುದು. ಈ ಕಲಾ ಸೇವಾ ಸಂಸ್ಥೆಗೆ, ಅರಿತ ನುರಿತ ಕಲಾ ಕೋವಿದರೇ ಅಧ್ಯಕ್ಷಿಣಿಯಾದರೆ ಪ್ರಗತಿಗೆ ಚೆನ್ನ. ತಾನು ತಮ್ಮ ತಾಯಿಯಿಂದ ಕಲಿತ ಕಲೆಯನ್ನೆಲ್ಲಾ ಈ ಕ್ಲಬ್ಬಿನಲ್ಲಿ ಉತ್ಸಾಹದಿಂದ ಹೇಳಿ ಕೊಟ್ಟು ಕಲಾರಾಧನೆ ಮಾಡಬೇಕೆಂಬ ಹಂಬಲ. ಅದ್ದರಿಂದ ಅಧ್ಯಕ್ಷಿಣಿಯನ್ನಾಗಿ ಆರಿಸಲು ನನ್ನ ಸಹಾಯ ಕೋರಿದ್ದಾಳೆ. ಆದರೆ ಇಷ್ಟು ಅವಸರದಲ್ಲಿ ಕಾಗದ ಬರೆಯಲು ಒಂದು ಕಾರಣ. ಬಂಡಿಮನೆ ಭಾನುಮತಿಯನ್ನು ಚುನಾಯಿಸಬೇಕೆಂದು ಕೆಲವು ಅರಿಯದ ಹುಡುಗಿಯರು ಕಾತುರಪಡುತ್ತಿದ್ದಾರೆ. ಅಷ್ಟೇ! ಇತ್ಯಾದಿ, ಕಾಗದ ಸಾರಾಂಶವನ್ನು ನನ್ನಾಕೆ ಹೇಳುವ ಹೊತ್ತಿಗೆ, ನಾನು ಸಾರನ್ನ ಪಲ್ಯ ಉಂಡು ಮುಗಿಸಿದ್ದೆ. ಅಲಮೇಲಮ್ಮನವರು ಎಷ್ಟು ಸಂಸ್ಥೆಗಳಿಗೆ ಅಧ್ಯಕ್ಷಿಣಿ ಎಂದು ಕೇಳಿದೆ. ನನ್ನಾಕೆ ಹೇಳಿದಳು, ಯಕ್ಷಗಾನ ಮಂದಿರ, ಮಹಿಳಾ ಸಮಾಜ; ಬಾಲ ಮಂದಿರ; ರಮಣಿ, ನಾಟಕ ಸಂಘ, ಸುಲಭ ಅಡಿಗೆ ಸಂಸ್ಥೆ; ಇವ್ವೈದಕ್ಕೂ ಅಧ್ಯಕ್ಷಿಣಿಯಾಗಿದ್ದಾರೆ ಅಲಮೇಲಮ್ಮ ಎಂದಳು.

ಆ ವೇಳೆಗೆ ನಾನು ಮಿಕ್ಕ ಪಲ್ಯ ತಿಂದು ಮುಗಿಸಿದ್ದೆ. ಅವಳೂ ಸಾರನ್ನ ಮುಗಿಸಿದ್ದಳು. ನಾನು ಮೊಸರನ್ನಕ್ಕೆ ಹುಳಿ ನಂಜಿಕೊಂಡು ಉಣ್ಣಲು ಶುರು ಮಾಡಿದಾಗ ನನ್ನಾಕೆ ಹುಳಿಯನ್ನ ಕಲಿಸಿಕೊಂಡಳು. "ಭಾನುಮತಿ ಅಲಮೇಲಮ್ಮ ಭೇಟಿಯಾದಾಗ ಅವರ ಆದರ, ಸಂಭ್ರಮ ನೋಡಿದರೆ ಅಕ್ಕತಂಗಿಯರ ಹಾಗೆ ಕಾಣ್ತಾರೆ. ಆದರೆ ಈಚೆ ಆಚೆ ಆದರೆ ಅವರ ಘರ ಘರ ಕೇರಿಗೆಲ್ಲಾ ಹರಡುತ್ತೆ. ಏನೂ ಪ್ರಯೋಜನವಿಲ್ಲದ ಈ ಸಂಸ್ಥೆಗಳ ಅಧ್ಯಕ್ಷಗಿರಿಗೆ ಯಾಕೆ ಕಾದಾಡ್ತಾರೋ ಕಾಣೆ ಎಂದು ನನ್ನಾಕೆ ಹೇಳುವ ಹೊತ್ತಿಗೆ ನನ್ನೂಟ ಮುಗಿದಿತ್ತು. ಇನ್ನು ಪಾತ್ರೆ ತೊಳೆಯೋ ಕೆಲಸವನ್ನಾದರೂ ತಪ್ಪಿಸಿಕೊಳ್ಳೋಣ ಅಂತ ಹಾಸಿಗೆ ಹಾಸಿ ಬರ್ತೀನಿ ಎಲಡಿಕೆ ರೆಡಿ ಮಾಡ್ತಿನಿ ಎಂದು ಹೇಳಿ ಮರುತ್ತರಕ್ಕೆ ಕಾಯದೆ ಕೊಠಡಿಯತ್ತ ಓಡಿದೆ.

ಎಲ್ಲವನ್ನು ಸರಿಮಾಡಿ, ಸಿಗರೇಟು ಸೇದಿ ಬರೋಹೊತ್ತಿಗೆ ನನ್ನಾಕೆಯ ಊಟ ಮುಗಿದಿತ್ತು. ಆದರೂ ತಟ್ಟೆಯ ತುದಿಯಲ್ಲಿದ್ದ ತುಣುಕು ಚಟ್ನಿಯನ್ನು ಬೆರಳಲ್ಲಿ ಸವರಿ ತೆಗೆದುಕೊಂಡು ಆರಾಮವಾಗಿ ಚೀಪುತ್ತಿದ್ದಳು. ನಾನು ಹಿಂತಿರುಗಿದ್ದುದನ್ನು ಕಂಡು, ಬೇಗ ಚಟ್ನಿಮುಗಿಸಿ ಕೈತೊಳೆದುಕೊಳ್ಳಲು ಬಚ್ಚಲ ಮನೆಗೆ ಹೋದಳು. ಪಾಪಿ ಸಮುದ್ರಕ್ಕೆ ಹೋದರೂ........ಸರಿ ಪಾತ್ರೆ ತೊಳೆದು ಅಡಕನಾಗಿಟ್ಟು, ಅಡಿಗೆಮನೆ ಬಾಗಿಲು ಹಾಕಿ, ಕೊಠಡಿಗೆ ಹಿಂತಿರುಗಿದಾಗ ನನ್ನಾಕೆ ಎಲಡಿಕೆ ಮುಗಿಸಿದ್ದಳು ಅಂತ ತುಟಿಮೇಲಿನ ರಂಗೇ ಹೇಳಿತು.

ಮಾರನೆಯ ಬೆಳಿಗ್ಗೆ ಏಳು ಗಂಟೆ ಹೊತ್ತಿಗೆ ಯಾರೋ ಬಂದು ಬಾಗಿಲು ತಟ್ಟಿದರು. ನನ್ನಾಕೆಯೇ ಎದ್ದು ಹೋಗಿ ಬಾಗಿಲು ತೆಗೆದು ಬಂದವರೊಡನೆ

ಮಾತನಾಡಿ ಹಿಂತಿರುಗಿ ಬರುವ ಹೊತ್ತಿಗೆ ನಾನೆದ್ದು ಹಾಸಿಗೆ ಸುತ್ತಿ, ಕೊಠಡಿಯನ್ನು ಶುಭ್ರಗೊಳಿಸಿದ್ದೆ. ಕಾಫಿಯನ್ನು ಸಿದ್ಧಮಾಡಿದ್ದೆ.

ಕಾಫಿ ಕುಡಿಯುತ್ತ ಹೇಳಿದಳು. "ಭಾನುಮತಿ ಅಷ್ಟುಬೇಗ ಎದ್ದು ಶೃಂಗಾರಮಾಡಿಕೊಂಡು ಬಂದಿದ್ದಳು. ರಂಗೋಲಿ ಕ್ಲಬ್ಬಿನ ಅಧ್ಯಕ್ಷಿಣಿಯ ಚುನಾವಣೆಯಲ್ಲಿ ನನ್ನ ಸಹಾಯ ಕೇಳುಕ್ಕೆ ಬಂದಿದ್ದಳು. ನಾನೇ ಎದ್ದು ಹೋಗಿದ್ದು ಒಳ್ಳೇದಾಯಿತು ಅಂದ್ರೆ ಎಷ್ಟು ಚೆಂದಾಗಿ ಕಾಣಿಸುತ್ತಿದ್ದಳು ಅಂತೀರಿ. ಬೆಳಿಗ್ಗೆ ; ಎಂದು ಹೇಳಿ ಒಂದು ಗುಟುಕು ಕಾಫಿ ಗುಟುಕರಿಸಿದಳು.

ಆ ಸಂಜೆ ಹೋಟಲಿನಿಂದ ಟಿಫಿನ್‌ಕ್ಯಾರಿಯರ್ ತೆಗೆದುಕೊಂಡು ಮನೆಗೆ ಬಂದಾಗ ಎಂಟು ಗಂಟೆಯಾಗಿತ್ತು. ಏನೆಂದು ಕೊಳ್ಳುತ್ತಾಳೋ ನನ್ನಾಕೆ ಎಂದು ಅಳುಕುತ್ತಲೇ ಇತ್ತು, ಮನಸ್ಸು. ಆದರೆ ಆಕೆ ಬಂದಿರಲಿಲ್ಲ. ನಗುತ ನಗುತ ಬಾಗಿಲು ಬೀಗ ತೆಗೆದುಕೊಂಡು ಒಳಕ್ಕೆ ಹೋಗುವುದರೊಳಗೆ ಆಕೆನೂ ಬಂದಳು. ನಾನು ಊಟ ಬಡಿಸ್ತಿಡುವಾಗ ಹೇಳಿದಳು, "ನೋಡಿ ಅಂದ್ರೆ ಭಾನುಮತಿ ಬಂದ ಐದು ತಿಂಗಳಲ್ಲೇ ಐದು ಸಂಸ್ಥೆಗಳ ಅಧ್ಯಕ್ಷಿಣಿಯಾಗಿ ಬಿಟ್ಟಿದ್ದಾಳೆ. ಹರಿಕಥಾ ಸಂಘ ; ಹುಡುಗರಾಟದ ಮಂಡಲಿ, ಕಸೂತಿ ಕ್ಲಬ್ಬು, ಸಂಯಮ ಸಂತಾನ ಸಂಘ ; ಭಾರತೀಯ ಕಲಾಮಂದಿರ. ಇಷ್ಟನ್ನೂ ಅಲಮೇಲಮ್ಮನ ಕೈಯಿಂದ ಬಿಡಿಸಿಕೊಂಡು ತಾನು ಅಧ್ಯಕ್ಷಿಣಿಯಾಗಿದ್ದಾಳೆ. ಇಬ್ಬರಿಗೂ ಐದು ಐದು ಸಂಘಗಳ ಅಧ್ಯಕ್ಷಪದವಿ ಸಿಕ್ಕಿದೆ. ರಂಗೋಲಿ ಕ್ಲಬ್ಬಿನ ಅಧ್ಯಕ್ಷ ಗಿರಿಯ ಮೇಲೇ ಈಗ ಹಿರಿಮೆ ನಿಂತಿದೆ. ಅದಕ್ಕೇನೆ ಅಷ್ಟು ಪೈಪೋಟಿಯಂತೆ. ಇವತ್ತು ರಂಗೋಲಿ ಕ್ಲಬ್ಬಿನ ಸಭೆ ಸೇರಿತ್ತು ಐದು ಗಂಟೆಗೆ. ಅಲಮೇಲಮ್ಮನವರು ಉಪಾಧ್ಯಕ್ಷಿಣಿಯಾಗಿ, ಕಾರ್ಯಕಲಾಪಗಳನ್ನು ಶುರುಮಾಡಿದ್ದರು. ಸುತ್ತಲೂ ನೋಡುತ್ತೇನೆ. ಭಾನುಮತಿ ಬಂದಿರಲಿಲ್ಲ. ಅಂದು ಸಂಜೆ ಸಂಯಮ ಸಂತಾನ ಸಂಘದ ಸಭೆಯೂ ಸೇರಿತ್ತೆಂದೂ, ಭಾನುಮತಿಯು ಅಲ್ಲಿರುವಳೆಂದೂ ಹೇಳಿದಳು, ಪಕ್ಕದಾಕೆ.

ಅಲಮೇಲಮ್ಮನವರು ಅಧ್ಯಕ್ಷಿಣಿಯ ಚುನಾವಣೆಯನ್ನು ಬೇಗ ಮುಗಿಸಬೇಕೆಂದು ಕಾತುರಪಡುತ್ತಿದ್ದರು. ಆದರೆ ಭಾನುಮತಿಯ ಸ್ನೇಹಿತೆ ಲಲಿತಾ ಕುಲಕರ್ಣಿ ಎದ್ದು ಹೋದ ಸಲದ ಮೀಟಿಂಗದ ಕಾರ್ಯಕಲಾಪದ ವರದಿ ಸುಸೂತ್ರ ಆಗೆಲ್ಲ ಆ ಸಂಜಿ ನಾನು ಹೀಂಗೆ ಹೀಂಗೆ ರಂಗೋಲಿ ಹಚ್ಚೋವಿಧಾನ ನಮ್ಮಲ್ಲಿಐತಿ ಎಂದೆಲ್ಲಾ ದೇಡು ತಾಸು ಒದರಿದ್ದೆ. ಅದು ವರದಿಯಲ್ಲಿ ಬಂದೇ ಇಲ್ಲ. ಮೊದಲ ಅದನ್ನ ಸುಸೂತ್ರಮಾಡಬೇಕು ಅಂದೇ ಬಿಟ್ಟಳು. ಈ ಮಾತಿನ ಯುದ್ಧ ಮುಗಿಯೋ ವೇಳೆಗೆ ಅರ್ಧ ತಾಸಾತು. ಆ ವೇಳೆಗೆ ಭಾನುಮತಿ ಸಭೆಗೆ ಬಂದಳು. ಲಲಿತಾ ಕುಲಕರ್ಣಿ ಮಂದಹಾಸದನಗೆ ಬೀರುತ್ತಾ ಕುಂತಳು.

ಓಹೋ! ಇನ್ನು ಗಲಭೆಗೆ ಶುರುವಾಗುತ್ತೆ. ಕುರುಕ್ಷೇತ್ರ ಮರುಕಳಿಸುತ್ತೆ. ಎಂದು ನಾನು ಹೆದರಿ ಬಂದು ಉಪಾಯ ಹೂಡಿದೆ ಅಂದ್ರೆ.

ಭಾರತೀಯ ಕಲಾಮಂದಿರದ ಕಾರ್ಯಕ್ರಮಗಳಲ್ಲೇ ರಂಗೋಲಿ ಹಚ್ಚೋದೂ ಸೇರಿರುತ್ತೆ. ಅಂದ ಕಾರಣ ರಂಗೋಲಿ ಕ್ಲಬ್ಬನ್ನೂ, ಭಾರತೀಯ ಕಲಾ ಮಂದಿರವನ್ನು ಒಟ್ಟುಗೂಡಿಸಿಬಿಡೋಣ. ಎಂದು ಠರಾವು ಸೂಚಿಸಿದೆ.

ಅಲಮೇಲಮ್ಮನವರಿಗೆ ರಂಗೋಲಿ ಕ್ಲಬ್ಬಿನಲ್ಲಿ ಅಧ್ಯಕ್ಷಿಣಿಯ ಪದವಿ ಸಿಗುತ್ತೆಂಬ ಧೈರ್ಯವಿತ್ತಿಲ್ಲ. ಅದಕ್ಕಾಗಿ ಆಕೆ ಸೈ ಎಂದು ಕೈಯೆತ್ತಿದರು. ಭಾನುಮತಿಗೆ ತನ್ನ ಅಧ್ಯಕ್ಷಿಣಿಯ ನೆರಳಲ್ಲೇ ರಂಗೋಲಿ ಪ್ರಸಾರ ಸಾಗುತ್ತೆ ಎಂದು ಅನ್ನಿಸಿತಾದ್ದರಿಂದ ಆಕೇನೂ ಸೈ ಎಂದು ಕೈ ಎರಡೂ ಎತ್ತಿದಳು, ಎಷ್ಟು ಚೆನ್ನಾಗಿ ಅಂತೀರೀ ಅಂದ್ರೆ.

ಲಲಿತಾಕುಲಕರ್ಣಿ ನಾನು ಮಂಡಿಸಿದ ಠರಾವನ್ನು ಅನುಮೋದಿಸಿದಳು. ಸರ್ವಾನು ಮತದಿಂದ ಠರಾವು ಅಂಗೀಕಾರವಾಯ್ತು. ಸಭೆ ಬರಕಾಸ್ತಾದ ಮೇಲೆ ಅಲಮೇಲಮ್ಮ ಬಂದು ತಬ್ಬಿಕೊಂಡು ವಂದಿಸಿದಳು. ಭಾನುಮತಿ ಬಂದು ಮುತ್ತಿಟ್ಟು ಹೋದಳು. ಇಂದು ನನ್ನದೇ ಆಡಂಬರ ನನ್ನದೇ ಸಭಾಯಶಸ್ಸು ಎಂದಳು ನನ್ನಾಕೆ. ಮೊದಲಿದ್ದ ಹಾಗೇ ಉಳಿಸಿದ್ದೆ ಇಬ್ಬರ ಸ್ಥಾನಗಳನ್ನೂ.

ಆ ವೇಳೆಗೆ ನಾನು ಊಟ ಮುಗಿಸಿದ್ದೆ. ಹಳೇ ಕಾರಣ ಹೇಳಿ ಹಾಸಿಗೆ ಹಾಸಲು ಕೊಠಡಿಗೆ ಹೊರಟಾಗ ಆಕೆ ಅನ್ನ ಸಾರು ಕಲಸುತ್ತಿದ್ದಳು.

ಕೊಠಡಿಯಲ್ಲಿ ಆರಾಮಾಗಿ ಆರು ಸಿಗರೇಟು ಮುಗಿಸುವ ಹೊತ್ತಿಗೆ ಪಾತ್ರೆ ತೊಳೆದ ಶಬ್ದ ಕೇಳಿಬಂತು. ಅಡುಗೆಮನೆ ಬಾಗಿಲು ಹಾಕಿದ ಇಂಪಾದ ನಿನಾದ ಕೇಳಿಸಿತು. ಮೇಲುದನಿಯ ಝುಣ ಝುಣ ಕೇಳಿಸಿತು.

ನನ್ನಾಕೆ ಬಂದಳು. ಈ ಮಧ್ಯಾಹ್ನ ಎಲ್ಲಿ ಹೋಗಿದ್ದಿರಿ ಎಂದು ಕೇಳಿದಳು ನಾನು ಎಲಡಿಕೆ ಅಗಿದು ಮುಗಿಸಿದ್ದೆ ಎಂಬುದನ್ನು ತುಟಿಯೇ ಹೇಳುತ್ತಿತ್ತು.

"ಮಧ್ಯಾಹ್ನ ಕುದುರೆ ಜೂಜಿಗೆ ಹೋಗಿದ್ದೆ" ಎಂದು ಧೈರ್ಯವಾಗಿ ಹೇಳಿದೆ.

—ಕುಮಾರ

ನನ್ನ ನೋಡ್ರಿ

ಫ್ಲೂ ವಿಚಾರ ಪೇಪರುಗಳಲ್ಲಿ ಓದಿದಾಗ, ನನಗೂ ಫ್ಲೂ ಬಂದಿದೆ ಅನ್ನೋದು ಗೊತ್ತಾಯ್ತು. ಬೇಗ ಡಾಕ್ಟರ ಹತ್ತಿರ ಹೋದೆ. ಎಷ್ಟಿತ್ತು ಜ್ವರ ಅಂದರು. ಮನೆಬಿಟ್ಟಾಗ ೯೯ ಅಂದೆ. "ತ್ಸ ತ್ಸ ಅಷ್ಟೇನೇ ಇದಕ್ಕಾಗಿ ಏಕೆ ಬಂದ್ರಿ? ನನ್ನ ನೋಡ್ರಿ, ನೂರು ದಶಕ ಆರು. ಆದರೂ ಮೂಗು ಮುಚ್ಚಿಕೊಂಡು ದುಡೀತಾ ಇದೀನಿ. ಮನೆಗೆ ಹೋಗಿ ಮಲಗಿಕೊಳ್ಳಿ. ಮೆಣಸಿನ ಸಾರು ಅನ್ನ ಉಂಡು ಮಲಗಿ" ಅಂತ ರೂಪಾಯಿಕಸಿದುಕೊಂಡು ಕಳಿಸಿದರು.

ಹದಿನೈದು ದಿವಸದಲ್ಲಿ ಉಗುರುಸುತ್ತು ಎದ್ದಿತು. ನಿಂಬೇಹೋಳು ಟೋಪಿ ಹಾಕಿದೆ. ಕೆಮ್ಮಣ್ಣು ಸುಣ್ಣಮಾಡಿಸಿದೆ. ಹಿಟ್ಟು ಕಟ್ಟಿದೆ. ದಿನೇ ದಿನೇ ನೋವು ಹೆಚ್ಚಾಯ್ತು ಕಡೆಗೆ ಡಾಕ್ಟರ ಹತ್ತಿರ ಹೋದೆ. ಬೆರಳು ತೋರಿಸಿದೆ. ಅವಲಕ್ಷಣ ಅಂದ್ರು. ಇಷ್ಟೇನೇ ತ್ಸ ತ್ಸ. "ನನ್ನ ಬೆರಳು ನೋಡ್ರಿ" ಮೂರು ತಿಂಗಳ ಹಿಂದೆ ಈ ಬೆರಳಿಗೆ ಉಗುರುಸುತ್ತು ಬಂದಿತ್ತು. ಮಚ್ಚು ಕತ್ತೀಲಿ ಶಸ್ತ್ರ ಚಿಕಿತ್ಸೆಮಾಡಿದರು. ಬೆರಳು ಪಕ್ಕದಲ್ಲಿ ಮೋರಿ ಇದ್ದಹಾಗೆ ಗುಳಿ ಬಿದ್ದಿದೆಯಲ್ಲಾ. ಅದೇ ಗುರ್ತು. ಮನೆಗೆ ಹೋಗಿ ಹಿಟ್ಟುಕಟ್ಟಿ. ಇನ್‌ಜಕ್ಷನ್ ಮಾಡ್ತೀನಿ ಅಂತ ಐದು ರೂಪಾಯಿ ಕಿತ್ತುಕೊಂಡು ಕಳಿಸಿದರು. ಮೂರನೆ ದಿನ ಉಗುರುಸುತ್ತು ಒಡೀತು. ವಾಸಿಯಾದಾಗ ಕಲೆಕೂಡ ಉಳಿಯಲಿಲ್ಲ ಇನ್ನೊಬ್ಬರಿಗೆ ತೋರಿಸಿ ಮೆರೆಯಲು

ಒಂದು ತಿಂಗಳಾಯ್ತು ಬೈಸಿಕಲ್ಲಿನಮೇಲೆ ಹತ್ತುವಾಗ ಪೆಡಲ್ ಕಳಚಿ ಬಿತ್ತು. ಅದರ ಮೇಲೆ ಕಾಲಿಟ್ಟ ನಾನೂ ಕೆಳಗೆ ಬಿದ್ದೆ. ನನ್ನ ಮೇಲೆ ಬೈಸಿಕಲ್ಲೂ ಬಿತ್ತು. ಬಲ ಕಣಕಾಲಮೇಲೆ ಭಾರಬಿದ್ದಿತ್ತು. ಎದ್ದಾಗ ಕುಂಟೋ ಹಾಗಾಗಿತ್ತು. ಓಹೋ ಮೂಳೆ ಮುರಿದಿದೆ ಅಂತ ಅಂದುಕೊಂಡು ಮಾರನೆ ಬೆಳಿಗ್ಗೆ ಡಾಕ್ಟರ ಹತ್ತಿರ ಹೋದೆ. ಆ ಹೊತ್ತಿಗೆ ಕಣಕಾಲು ಊದುಕೊಂಡಿತ್ತು. ಬಿಸಿಯಾಗಿತ್ತು. ಕೆಂಪಗೂ ಇತ್ತು. ಡಾಕ್ಟರು ನೋಡಿದರು ಹೇಗಾಯ್ತು ಎಂದರು. ಹೀಗೆ ಹೀಗೆ ಅಂತ ವಿವರಿಸಿದೆ. ತ್ಸ ತ್ಸ ಇಷ್ಟೇನೆ? "ನನ್ನ ನೋಡ್ರಿ" ಎಂದು ಶರಾಯಂಚನ್ನು ಎತ್ತಿ ಬೂಡ್ಸು ಕಾಲ್ಚೀಲಕಳೆದು ತಮ್ಮ ಕಣಕಾಲು ತೋರಿಸಿದರು. ನನ್ನ

ಕಣಕಾಲು ಈಗಿದ್ದ ಪ್ರಮಾಣದಲ್ಲಿ ಅವರ ಕಣಕಾಲೂ ಇತ್ತು. ಹ್ಞಾ! ಎಂದೆ. ಮೂರು ವರ್ಷಗಳ ಹಿಂದೆ ಮೋಟಾರು ಸೈಕಲ್ಲಿನಲ್ಲಿ ಹೋಗುವಾಗ ಅದು ನನ್ನ ಕಣಕಾಲಮೇಲೆ ಬಿತ್ತು. ಅದರ ಮೇಲೆ ಮೊಟಾರು ಲಾರಿ ಹತ್ತಿಕೊಂಡಿತ್ತು. ಆರು ತಿಂಗಳು ವಜ್ರಗಾರೆ ಹಾಕಿ ಪಟ್ಟಿ ಕಟ್ಟಿದ್ದರು. ನೋವು ಹೋಯ್ತು ಅವಲಕ್ಷಣ ಉಳಿಯಿತು. ಆದರೆ ಆಗಲೂ ಕೆಲಸಮಾಡುತ್ತಿದ್ದೆ. ನಿಮಗೇನು ಮಹಾ! ಬೈಸಿಕಲು ಬಿದ್ದಾಕ್ಷಣ ಒದ್ದೆ ಬಟ್ಟೆ ಕಣಕಾಲಿಗೆ ಕಟ್ಟಿಕೊಂಡು ಎರಡು ದಿನ ಬಿದ್ದುಕೊಂಡಿರಿ. ಈ ಪುಸ್ತಕ ಓದಿ ಹಿತವಾಗಿರುತ್ತೆ. ನಾನೇ ಬರೆದಿರೋದು. ಹತ್ತು ರೂಪಾಯಿ ಕೊಡಿ ಅಂತ ಪಾಸರುಮಾಡಿ ನನ್ನ ಕಳಿಸಿಕೊಟ್ಟರು.

ಇನ್ನೆರಡು ತಿಂಗಳಲ್ಲಿ ಹಸಿವು, ಆದರೂ ತಿನ್ನಲಾಗಲಿಲ್ಲ. ತಿಂದರೂ ಹೊಟ್ಟೆ ಉರಿ, ಹೊಟ್ಟೆ ಉಬ್ಬಸ. ಮನೆಯಾಕೆ ಔಷಧಿ ಪಥ್ಯ ಎಲ್ಲಾ ಮುಗಿಯಿತು. ಉದರ ಬೇನೆ ಉಳಿದುಕೊಂಡಿತು. ತಿರುಗಿ ಡಾಕ್ಟರ ಹತ್ತಿರ ಹೋದೆ. "ತೀರ್ಥಯಾತ್ರೆಗೆ ಹೋಗಿ ಬಂದಿದ್ದೀರಾ ದೇವರು ವರ ಕೊಟ್ಟನಾ" ಎಂದರು ಡಾಕ್ಟ್ರು "ಇಲ್ಲಾ ಡಾಕ್ಟರೆ ತೀರ್ಥಯಾತ್ರೆಗೆ ಹೋಗಲಿಲ್ಲ. ನಿಮ್ಮಲ್ಲಿ ತೀರ್ಥ ತೆಗೆದುಕೊಳ್ಳೋಕ್ಕೆ ಅಂತ ಯಾತ್ರೆ ಬಂದಿದ್ದೇನೆ. ಉಂಡನ್ನ ಉರಿಯಾಗುತ್ತೆ ಹೊಟ್ಟೇಲಿ. ತಿದಿ ಒತ್ತಿ ಬೆಂಕಿ ಹಚ್ಚಿದ ಹಾಗಾಗುತ್ತೆ ಎದೇಲೆಲ್ಲಾ. ಉಣ್ಣಬೇಕು ಅಂತ ಆಶೆ. ಉಣ್ಣಲು ಹೆದರಿಕೆ ಎಂದೆಲ್ಲಾ ವಿವರಿಸಿದೆ.

"ಇದನ್ನು ನೋಡ್ರಿ" ಎಂದು ಮೇಜಿನೊಳಗೆ ಹುಡುಕಿ ಒಂದು ಚಿತ್ರ ಎದುರಿಗೆ ಹಿಡಿದರು. ಪಿಶಾಚಿಯ ಚಿತ್ರ ಇದ್ದಂತಿತ್ತು. ಕಪ್ಪು ಕಪ್ಪು ಮಧ್ಯ ಮಧ್ಯೆ ಅಲ್ಲಿ ಇಲ್ಲಿ ಬಿಳಿ ಮೋಡಗಳು. ಆದರೂ ಮನುಷ್ಯ ರೂಪಿನ ರೇಖೆ ಊಹಿಸಬಹುದಾಗಿತ್ತು. ಯಾವ ದೆವ್ವದ ಚಿತ್ರ ಇದು ಎಂದೆ. ಯಾವ ದೆವ್ವದ್ದೂ ಅಲ್ಲ. ನನ್ನ ಎಕ್ಸ್‌ರೇ ಚಿತ್ರ. ಹೊಟ್ಟೆ ಕರುಳಿನದು ಮೂರು ತಿಂಗಳಿಂದ ಹೊಟ್ಟೆ ರಣವಾಗಿದೆ. ಬರೀ ಹಾಲು ಕುಡಿದುಕೊಂಡು ಅರಳ್ಹಿಟ್ಟು ಬೆಲ್ಲ ತಿಂದುಕೊಂಡು ಕೆಲಸ ಮಾಡ್ತಾ ಕಾಲ ಹಾಕ್ತಿದೀನಿ. ನಿಮ್ಮದೇನ್ರಿ ಮಹಾ. ಸ್ವಲ್ಪ ಓಮದನೀರು ಕುಡೀರಿ. ಖಾರ ತಿನ್ನಬೇಡಿ. ಕಾದಾಡಬೇಡಿ ಯಾರ ಹತ್ತಿರನೂ. ಅದೇ ವಾಶಿಯಾಗುತ್ತೆ. ಈ ಔಷಧಿ ತೊಗೊಳ್ಳಿ ತಿಂಗಳಿಗೆ ಸಾಕಾಗುತ್ತೆ ಅಂತ ೨೦ ರೂಪಾಯಿ ದರೋಡೆಮಾಡಿ ಕಳಿಸಿದರು. ಇದೇ ರೀತಿ ಬಂದ ಮೂರು ತಿಂಗಳಲ್ಲಿ ಆರು ಸರ್ತಿ ಅವರ ಹತ್ತಿರ ಹೋಗಬೇಕಾಯ್ತು. ತಲೆನೋವಿಗೊಮ್ಮೆ, ಕಿವಿ ಇರಿತಕ್ಕೊಮ್ಮೆ, ಸೊಂಟ ಹಿಡಿದಿದ್ದಕ್ಕೊಮ್ಮೆ, ಕೆಮ್ಮಿಗೆ ಒಮ್ಮೆ, ಕಾರಿದ್ದಕ್ಕೊಮ್ಮೆ, ನಿದ್ರೆ ಬರದಿದ್ದಕ್ಕೊಮ್ಮೆ.

ಒಂದೊಂದು ಸರ್ತಿಯೂ ತ್ಸು ತ್ಸು ಇಷ್ಟೇನೇ "ನನ್ನ ನೋಡ್ರಿ" ಅಂತ ತಲೆನೋವಿಗೆ ಚಿಟಿಕೆ ಹಾಕಿದ ಗುರ್ತು, ಕಿವಿ ಹಿಂದೆ ಆಪರೇಷನ್ ಗುರುತು.

ಸೊಂಟಕ್ಕೆ ಕಟ್ಟಿಕೊಂಡಿದ್ದ ಕಬ್ಬಿಣದ ಪಟ್ಟಿ. ಬಾಯಿ ತೆರೆದು ಕೆಮ್ಮಿನ ಪೆಪ್ಪರ ಮಿಂಟು, ಕಾರುವುದನ್ನು ತಡೆಯಲಿಕ್ಕೆಂದು ಮೂಸಿನೋಡುವ ಔಷಧಿ ಎಲ್ಲಾ ತೋರಿಸಿದರು. ನಾನು ನಿದ್ರೆಮಾಡಿ ತಿಂಗಳಾನುಗಟ್ಟಲೆ ಆಯಿತು, ಅದಕ್ಕೇ ಪುಸ್ತಕ ಓದುತ್ತೀನಿ ಅಥವಾ ಬರೆಯಿತ್ತೀನಿ ಎಂದರು.

ಸಂತಾನ ಯೋಜನೆಯಪರವಾಗಿ ಆಪರೇಷನ್ ಮಾಡಿಸಿಕೊಂಡರೆ ಹದಿನೈದು ದಿನ ಪುಕಟ್ಟು ರಜಾ ಕೊಡುವುದಾಗಿ ಸರ್ಕಾರ ಘೋಷಿಸಿದಾಗ ಆಪರೇಷನ್ ಮಾಡಿಸಿಕೊಳ್ಳಲು ಡಾಕ್ಟರ ಹತ್ತಿರ ಹೋದೆ. ಅವರು "ನನ್ನ ನೋಡ್ರಿ ತ್ಸು ತ್ಸು" ಹೇಳಲೇ ಇಲ್ಲ. ಅವರಿಗೆ ೬೦ ವರ್ಷದ ಪ್ರಾಯ. ವಿಧುರರಾಗಿ ಹತ್ತು ವರ್ಷ ಆಗಿತ್ತು.

ಕಡೆಗೆ ಡಾಕ್ಟರ ಹತ್ತಿರ ಹೋಗಿ ಗೆದ್ದೆ.

—ಬಚ್ಚ



ನಾನು ಸ್ವತಂತ್ರ ಪಕ್ಷ ಸೇರಿಕೊಂಡೇಬಿಟ್ಟೆ! ಹಣವಾದರೂ ಇದೆ ಅಲ್ಲಿ
ಹೇಗೂ ಬೀಗರ ಬೀಗರೇ ನಮ್ಮ ಸ್ನೇಹಿತರಲ್ಲವೇ?